

# ದೈವಿಕ ದಯೆ

ಅಸಾಮಾನ್ಯ ದಯೆಯನ್ನು ಎದುರು ನೋಡುವುದು. ಜನರು ನಿಮಗೆ
ಏನಾದರೊಂದು ಸಂಭವಿಸಲಿ ಎಂಬುದಾಗಿ
ನಿರೀಕ್ಷಿಸಿಕೊಂಡಿದ್ದಕ್ಕೆ ಪ್ರತಿ ವಿರುದ್ಧವಾದದನ್ನು ದೇವರು ಮಾಡುತ್ತಾನೆ.

ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ

ಮುದ್ರಣ  ಮತ್ತು ಹಂಚಿಕೆ : **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**

ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಜುಲೈ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.

ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಥ್ ಡಿಸೈನ್ಸ್

**Contact Information:**

All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA
Phone: +91-80-25452617
Email: contact@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.
Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.
Scriptures marked as "(GNB)" are taken from the GNB – Second Edition © 1992 by American Bible Society.  Used by permission.

**ಹಣಕಾಸಿನ ಪಾಲುಗಾರಿಕೆ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ದಯವಿಟ್ಟು apcwo.org/give  ಅನ್ನು ಸಂಪರ್ಕಿಸಿ ಅಥವಾ ಈ ಪುಸ್ತಕದ ಕೊನೆಯ ಭಾಗದಲ್ಲಿರುವ ''ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ'' ಎಂಬ ಪುಟ ನೋಡಿರಿ. ವಂದನೆಗಳು!

**ಮೇಲಿಂಗ್ ಪಟ್ಟಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ದಯವಿಟ್ಟು ಇ-ಮೇಲ್ ಕಳುಹಿಸಿರಿ. bookrequest@apcwo.org

**ಭಾರತದೊಳಗೆ ದೊಡ್ಡ ಗಾತ್ರದ ಉಚಿತ ವಿತರಣೆ**

ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನು ನಿಮಗೆ ಕಳುಹಿಸುತ್ತೇವೆ. ದಯವಿಟ್ಟು ಇ-ಮೇಲ್ ಕಳುಹಿಸಿರಿ. bookrequest@apcwo.org

(Kannada Book - Divine Favor)

# ದೈವಿಕ ದಯೆ

# ವಿಷಯಸೂಚಿ


| | | |
|---|---|---|
| 1. | ದೈವಿಕ ದಯೆ ಅಂದರೇನು? | 1 |
| 2. | ದೈವಿಕ ದಯೆ ನಿಮ್ಮ ಮೇಲಿರುವಾಗ ಏನು ಸಂಭವಿಸುತ್ತದೆ? | 8 |
| 3. | ದೈವಿಕ ದಯೆ ನಮ್ಮ ಮೇಲೆ ಬರಲು ಏನು ಕಾರಣವಾಗುತ್ತದೆ? | 10 |
| 4. | ದೈವಿಕ ದಯೆಯ ಉಸ್ತುವಾರಿಕೆ | 18 |

# 1

# ದೈವಿಕ ದಯೆ ಅಂದರೇನು?

ದೈವಿಕ ದಯೆ ಅನ್ನುವುದು ದೇವರು, ಆತನ ಜನರ ಮೇಲೆ ಯಾವುದೋ ವಿಷಯವನ್ನು ಬಿಡುಗಡೆ ಮಾಡುವುದಾಗಿದೆ. ಇದು ಒಂದು ಆತನು ನಮಗಾಗಿ ಅನುಗ್ರಹಿಸುವ, ಆತನ ಆಶೀರ್ವಾದವಾಗಿದೆ. ಈ ಒಂದು ಅಧ್ಯಯನದಲ್ಲಿ ದೈವಿಕ ದಯೆ ಅಂದರೇನು ಎಂಬುವುದನ್ನು ನಾವು ಪರಿಶೋಧಿಸುತ್ತೇವೆ. ಅದು ನಮ್ಮ ಜೀವಿತಗಳಿಗೆ ಏನನ್ನು ತರುತ್ತದೆ ಮತ್ತು ದೈವಿಕ ದಯೆಯನ್ನು ಪಡೆದುಕೊಳ್ಳುವುದಕ್ಕೆ ನಾವು ಮಾಡಬೇಕಾದುದೇನು ಎಂಬುದನ್ನು ಅಭ್ಯಸಿಸುತ್ತೇವೆ.

- ದೈವಿಕ ದಯೆ ಅಂದರೇನು?
- ದೈವಿಕ ದಯೆ ನಮ್ಮ ಮೇಲಿರುವಾಗ ಏನು ಸಂಭವಿಸುತ್ತದೆ?
- ದೈವಿಕ ದಯೆ ನಮ್ಮ ಮೇಲೆ ಬರಲು ಏನು ಕಾರಣವಾಗುತ್ತದೆ?

ದೈವಿಕ ದಯೆ ಅನ್ನುವುದು ಒಬ್ಬ ವ್ಯಕ್ತಿಯ ಮೇಲೆ ಬಿಡುಗಡೆಗೊಳ್ಳುವ ಮತ್ತು ವ್ಯಕ್ತಿಯ ಪ್ರಭಾವ ಕೊಡುವ, ಜನರಿಗೆ ಪ್ರವೇಶ ಕೊಡುವ, ಜನರು ಸ್ಥಳಗಳು ಅಥವಾ ವಿಷಯಗಳು ಅಸಾಧಾರಣ ಅವಕಾಶಗಳು, ಮೇಲಕ್ಕೆತ್ತುವಿಕೆ ಮತ್ತು ದೈವಿಕ ಮಧ್ಯಸ್ಥಿಕೆಗೆ ಪ್ರವೇಶ ಕೊಡುವ ದೇವರ ದತ್ತಿಯಾಗಿದೆ.

ದೇವರು ಪಕ್ಷಪಾತಿಯಲ್ಲ ಎಂಬುದಾಗಿ ಸತ್ಯವೇದವು ಮಾತಾಡುತ್ತದೆ. (ರೋಮಾಪುರದವರಿಗೆ 2:11; ಅಪೊಸ್ತಲರ ಕೃತ್ಯಗಳು 10:34)

**ರೋಮಾಪುರದವರಿಗೆ 2:11**
**ದೇವರಿಗೆ ಪಕ್ಷಪಾತವಿಲ್ಲ.**

**ಕೀರ್ತನೆಗಳು 34:8**
**ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ; ಆತನನ್ನು ಆಶ್ರಯಿಸಿಕೊಂಡವರು ಎಷ್ಟೋ ಧನ್ಯರು.**

**ಅಪೊಸ್ತಲರ ಕೃತ್ಯಗಳು 10:34**
**ಆಗ ಪೇತ್ರನು ಉಪದೇಶ ಮಾಡಲಾರಂಭಿಸಿ ಹೇಳಿದ್ದೇನೆಂದರೆ – ದೇವರು ಪಕ್ಷಪಾತಿಯಲ್ಲ.**

ದೇವರು ಪ್ರತಿಯೊಬ್ಬರನ್ನು ಸಮಾನವಾಗಿ ಪ್ರೀತಿಸುತ್ತಾನೆ ಮತ್ತು ಆತನು ವ್ಯಕ್ತಿಗಳನ್ನು ಗೌರವಿಸುವವನಲ್ಲ. ಹಾಗಿದ್ದರೂ ಮಾನವ ಕುಲದ ಜೊತೆಗಿನ ವ್ಯವಹಾರದಲ್ಲಿ ಕೆಲವು ವ್ಯಕ್ತಿಗತವಾದ ಅಥವಾ ನಿರ್ದಿಷ್ಟ ಬಿಂದುವುಳ್ಳ ಸಮಯದಲ್ಲಿನ ಜನರ ಗುಂಪುಗಳ ಮೇಲೆ, ಒಂದು ನಿರ್ದಿಷ್ಟ ಸಮಯದಲ್ಲಿ ಅಥವಾ ಅವರ ಜೀವಿತಗಳಲ್ಲಿನ ಕೆಲ ಕ್ಷಣಗಳಲ್ಲಿ, ದೈವಿಕ ದಯೆಯನ್ನು ದೇವರು ತಾನೇ ಅವರ ಮೇಲೆ ಬಿಡುಗಡೆ ಮಾಡುವುದನ್ನು ಕಾಣುತ್ತೇವೆ ಮತ್ತು ಇದರ ಕುರಿತು ನಾನು ನಿಮ್ಮಲ್ಲಿ ಅರಿವು ಮೂಡಿಸಬೇಕೆಂದುಕೊಂಡಿರುವುದು ನನ್ನ ಅಪೇಕ್ಷೆಯಾಗಿದೆ. ಆದುದರಿಂದ, ದೇವರಿಂದ, ನಾವುಗಳು ದೈವಿಕ ದಯೆಯನ್ನು ಪಡೆದುಕೊಳ್ಳುವುದನ್ನು ಎದುರುನೋಡಬಹುದಾಗಿದೆ.

## ದೈವಿಕ ದಯೆಯು ಜನರ ಮೇಲೆ ಬರುವ ಉದಾಹರಣೆಗಳು

## ನೆಹೆಮಿಾಯ

ದೈವಿಕ ದಯೆಯನ್ನು ಪಡೆದುಕೊಂಡವರಲ್ಲಿ ನೆಹೆಮಿಾಯನು ಸಹ ಅಂತಹ ಉದಾಹರಣೆಯಾಗಿದ್ದಾನೆ. ಸತ್ಯವೇದವು ಯೆರೂಸಲೇಮನ್ನು ಆಕ್ರಮಣ ಮಾಡಿ, ಅದನ್ನು ವಶಪಡಿಸಿಕೊಂಡ. ಬ್ಯಾಬಿಲೋನಿಯಾದ ಅರಸನಾದ ನೆಬೂಕದ್ನೆಚ್ಚನ ಕುರಿತು ದಾಖಲೆಯನ್ನು ಹೊಂದಿದೆ. ಅವನು ದೇವಾಲಯ ಮತ್ತು ನಗರದ ಗೋಡೆಗಳನ್ನು ಮುರಿದು ಹಾಕಿದನು ಮತ್ತು ಬ್ಯಾಬಿಲೋನಿಯಕ್ಕೆ ಅನೇಕ ಜನರನ್ನು ಸೆರೆಯಾಳುಗಳಾಗಿ ತೆಗೆದುಕೊಂಡು ಹೋದನು. ಅಲ್ಲಿ ಒಂದು ಸಂಕ್ರಮಣವು ಜರುಗಿತು. ಪರ್ಶಿಯನ್ ಸಾಮ್ರಾಜ್ಯದವರು ಬ್ಯಾಬಿಲೋನಿಯನ್ ಸಾಮ್ರಾಜ್ಯದವರನ್ನು ಸದೆ ಬಡಿದರು. ಆ ಒಂದು ಸಮಯದಲ್ಲಿ ದೇವ ಜನರು ಸೆರೆಯಲ್ಲಿದ್ದರು ಮತ್ತು ನೆಹೆಮಿಾಯನು ಅರಸನ ಅರಮನೆಯಲ್ಲಿ ಪಾನ ಸೇವಕನಾಗಿದ್ದನು. ರಾಜನು ಪಾನ ಮಾಡುವುದಕ್ಕೆ ಏನೇನು ಬೇಕಾಗಿತ್ತೋ ಅದನ್ನು ನೆಹೆಮಿಾಯನು ಕೊಡುವ ಸೇವೆ ಮಾಡುತ್ತಿದ್ದನು. ಯೆರೂಸಲೇಮಿನಲ್ಲಿ ಏನೇನು ಜರುಗುತ್ತಿದೆ ಎಂಬ ಮಾಹಿತಿಯು ನೆಹೆಮಿಾಯನಿಗೆ ಅರಮನೆಯಲ್ಲಿ ದೊರೆಯಿತು. ಅವನ ಹೃದಯವು ಪ್ರೇರಣೆಗೊಂಡಿತು ಮತ್ತು ಯೆರೂಸಲೇಮಿನ ಕುರಿತು ನಿಜವಾಗಿಯೂ ಏನಾದರೊಂದು ಮಾಡಬೇಕೆಂಬುದಾಗಿ ಅನ್ನಿಸಿತು. ‘‘ನಾನು ಹಿಂತಿರುಗಿ ಹೋಗಬೇಕು ಮತ್ತು ಯೆರೂಸಲೇಮಿನ

ಪೌಳಿಗೋಡೆಗಳನ್ನು ತಿರುಗಿ ಕಟ್ಟಬೇಕು'' ಎಂಬುದಾಗಿ ಸ್ವತಃ ತಾನೇ ಹೇಳಿಕೊಂಡನು ಮತ್ತು ಪ್ರಾರ್ಥಿಸಲು ಪ್ರಾರಂಭಿಸಿದನು.

**ನೆಹೆಮಿಾಯ 1:11**

**ಸ್ವಾಮೀ ಕೃಪೆ ಮಾಡು, ನಿನ್ನ ಸೇವಕನಾದ ನನ್ನ ಪ್ರಾರ್ಥನೆಗೂ ನಿನ್ನ ನಾಮಸ್ಮರಣೆಯಲ್ಲಿ ಆನಂದಿಸುವ ನಿನ್ನ ಭಕ್ತರ ಪ್ರಾರ್ಥನೆಗೂ ಕಿವಿಗೊಡು. ನಿನ್ನ ಸೇವಕನು ಈ ಹೊತ್ತು ಆ ಮನುಷ್ಯನ ದಯೆಗೆ ಪಾತ್ರನಾಗಿ ಕೃತಾರ್ಥನಾಗುವಂತೆ ಅನುಗ್ರಹಿಸಬೇಕು ಎಂದು ಪ್ರಾರ್ಥಿಸಿದೆನು.**

ಆದುದರಿಂದ ನೆಹೆಮಿಾಯನು ಪ್ರಾರ್ಥಿಸಿದನು ಮತ್ತು ಅರಸನಿಂದ ಕರುಣೆ ದೊರೆಯಬೇಕೆಂಬುದಾಗಿ ದೇವರಲ್ಲಿ ಕೇಳಿಕೊಂಡನು. ಇದು ಒಂದು ದೈವಿಕ ದಯೆಗಾಗಿ ಮಾಡಿದಂತಹ ಪ್ರಾರ್ಥನೆಯಾಗಿತ್ತು. ಕೆಲವು ದಿನಗಳ ನಂತರ, ನೆಹೆಮಿಾಯನು ಅರಮನೆಗೆ ಹಿಂತಿರುಗಿ ಹೋದನು.

**ನೆಹೆಮಿಾಯ 2:1-9**

**ನಾನು ಅರಸನ ಪಾನ ಸೇವಕನಾಗಿದ್ದೆನು. ಅರಸನಾದ ಅರ್ತಷಸ್ತನ ಇಪ್ಪತ್ತನೆಯ ವರುಷದ ಚೈತ್ರ ಮಾಸದಲ್ಲಿ ಅರಸನು ದ್ರಾಕ್ಷಾರಸ - ಪಾನ ಮಾಡುವ ಹೊತ್ತಿನಲ್ಲಿ ನಾನು ದ್ರಾಕ್ಷಾರಸವನ್ನು ತಂದು ಅವನಿಗೆ ಕೊಟ್ಟೆನು. ನಾನು ಅವನ ಸನ್ನಿಧಿಯಲ್ಲಿ ಹಿಂದೆ ಎಂದೂ ಖಿನ್ನನಾಗಿರಲಿಲ್ಲ. ಅರಸನು ನನಗೆ ನೀನು ಕಳೆಗುಂದಿದವನಾಗಿ ಕಾಣುವದೇಕೆ? ನಿನಗೆ ದೇಹಾಲಸ್ಯವಿಲ್ಲವಲ್ಲಾ; ಇದಕ್ಕೆ ಮನೋವೇದನೆಯೇ ಹೊರತು ಬೇರೇನೂ ಕಾರಣವಲ್ಲ ಎಂದು ಹೇಳಲು ನನಗೆ ಮಹಾಭೀತಿಯುಂಟಾಯಿತು. ನಾನು ಅರಸನಿಗೆ ಅರಸನು ಚಿರಂಜೀವಿಯಾಗಿರಲಿ. ನನ್ನ ಪೂರ್ವಿಕರ ಸಮಾಧಿಗಳಿರುವ ಪಟ್ಟಣವು ಹಾಳಾಗಿ ಅದರ ಬಾಗಿಲುಗಳು ಬೆಂಕಿಯಿಂದ ಸುಟ್ಟು ಹೋಗಿವೆ; ಹೀಗಿರುವಲ್ಲಿ ನನ್ನ ಮುಖವು ಕಳೆಗುಂದದೆ ಇರುವದು ಹೇಗೆ ಎಂದು ಹೇಳಿದೆನು. ಆಗ ಅರಸನು ನನ್ನನ್ನು ನಿನ್ನ ಅಪೇಕ್ಷೆಯೇನು ಎಂದು ಕೇಳಿದನು. ನಾನು ಪರಲೋಕದ ದೇವರನ್ನು ಪ್ರಾರ್ಥಿಸಿ ಅರಸನಿಗೆ ರಾಜರ ಚಿತ್ತವಿರುವುದಾದರೆ ಮತ್ತು ಸೇವಕನು ತಮ್ಮ ದೃಷ್ಟಿಯಲ್ಲಿ ದಯೆಗೆ ಪಾತ್ರನಾಗಿದ್ದರೆ ನನ್ನ ಪಿತೃಗಳ ಸಮಾಧಿಗಳಿರುವ ಪಟ್ಟಣವನ್ನು ತಿರುಗಿ ಕಟ್ಟುವುದಕ್ಕೋಸ್ಕರ ಯೆಹೂದ ದೇಶಕ್ಕೆ ಹೋಗಲು ನನಗೆ ಅಪ್ಪಣೆಯಾಗಬೇಕು ಎಂದು ಹೇಳಿದೆನು. ರಾಣಿಯು ಅರಸನ ಹತ್ತಿರದಲ್ಲೇ ಕೂತುಕೊಂಡಿದ್ದಳು. ಅರಸನು ಪ್ರಯಾಣಕ್ಕೆ ನಿನಗೆಷ್ಟು ಕಾಲ ಬೇಕು? ಯಾವಾಗ ಹಿಂದಿರುಗುವಿ ಎಂದು ವಿಚಾರಿಸಿದಾಗ ನಾನು ಕಾಲವನ್ನು ಸೂಚಿಸಲು ಅವನು ಒಪ್ಪಿಕೊಂಡು ಅಪ್ಪಣೆ ಕೊಟ್ಟನು. ತರುವಾಯ ನಾನು ಅರಸನಿಗೆ ಹೊಳೆಯಾಚೆಯ ದೇಶಾಧಿಪತಿಗಳು ತಮ್ಮ ಪ್ರಾಂತಗಳಲ್ಲಿ ಹಾದು ಯೆಹೂದ ಸೀಮೆಗೆ ಹೋಗುವದಕ್ಕೆ ನನಗೆ ಅಪ್ಪಣೆ ಕೊಡುವ ಹಾಗೂ ರಾಜವನಪಾಲಕನಾದ ಆಸಾಫನು ದೇವಾಲಯದ ಕೋಟೆಯ ಬಾಗಿಲುಗಳು, ಪಟ್ಟಣದ ಪೌಳಿಗೋಡೆ, ನಾನು ಸೇರುವ ಮನೆ ಇವುಗಳಿಗೆ ಬೇಕಾಗುವ ತೊಲೆಗಳಿಗಾಗಿ ಮರಗಳನ್ನು ಕೊಡುವ ಹಾಗೂ ರಾಜರು ನನ್ನ ಕೈಯಲ್ಲಿ ಪತ್ರಗಳನ್ನು ದಯ ಮಾಡಬೇಕು ಎಂದು ಬಿನ್ನವಿಸಲು ನನ್ನ ದೇವರ ಕೃಪಾಹಸ್ತ ಪಾಲನೆ ನನಗಿದ್ದದ್ದರಿಂದ ಅರಸನು ಅವುಗಳನ್ನು ನನಗೆ ಕೊಟ್ಟಿದ್ದಲ್ಲದೆ ನನ್ನನ್ನು ಸಾಗ ಕಳುಹಿಸುವುದಕ್ಕೋಸ್ಕರ ಸೇನಾಧಿಪತಿಗಳನ್ನು, ರಾಹುತರನ್ನೂ ಕಳುಹಿಸಿದನು.**

ನೆಹೆಮಿೊಯನು ಅರಸನ ಬಳಿ ಕೇಳಿದ್ದನ್ನು ಪ್ರಯತ್ನಿಸಿ ಮತ್ತು ಅರ್ಥ ಮಾಡಿಕೊಳ್ಳಿರಿ. ಪ್ರಾಥಮಿಕವಾಗಿ ಅವನು, ಅರಸನ ಶತ್ರುಗಳ ಬಳಿಗೆ ಹಿಂದಿರುಗಿ ಹೋಗಬೇಕೆಂಬುದಾಗಿ ಅರಸನಿಗೆ ಹೇಳಿದನು ಮತ್ತು ಅರಸನಿಗೆ ವಿರುದ್ಧವಾಗಿ ದಂಗೆ ಏಳಲು ತಮ್ಮನ್ನು ಬಲಗೊಳಿಸಲು ಸಹಾಯ ಮಾಡಬೇಕು. ಯಾಕೆಂದರೆ ಆಗಿನ ಕಾಲಗಳಲ್ಲಿ ನಗರದ ಪೌಳಿಗೋಡೆಗಳು ತಮ್ಮನ್ನು ಕಾಪಾಡಿಕೊಳ್ಳಲು ಇದ್ದಂತಹ ಪ್ರಾಥಮಿಕ ಕಾರ್ಯ ವಿಧಾನಗಳಾಗಿದ್ದವು. ಅವರು ಬಹಳ ಬಲಿಷ್ಠವಾದ ಗೋಡೆಗಳನ್ನು ಕಟ್ಟಿದ್ದರೆ, ಶತ್ರುಗಳಿಗೆ ವಿರುದ್ಧವಾಗಿ ತಮ್ಮನ್ನು ರಕ್ಷಿಸಿಕೊಳ್ಳಬಹುದಿತ್ತು. ನೆಹೆಮಿೊಯನಿಂದ ಇದು ಒಂದು ಅತಿರೇಕದ ಮನವಿಯಾಗಿತ್ತು. ಆದಾಗ್ಯೂ ರಾಜನು ಅವೆಲ್ಲವುಗಳನ್ನು ಅನುಗ್ರಹಿಸಿದನು. ನೆಹೆಮಿೊಯನು ಒಬ್ಬ ರಾಜಕೀಯ ವ್ಯಕ್ತಿ ಅಥವಾ ಬಹಳ ಪ್ರಭಾವವುಳ್ಳ ವ್ಯಕ್ತಿಯಲ್ಲ. ಆದರೆ ಅವನು ಅರಸನ ಅರಮನೆಯಲ್ಲಿ ಬರೀ ಪಾನ ಸೇವಕನಾಗಿದ್ದನು ಎಂಬುದನ್ನು ನೆನೆಸಿಕೊಳ್ಳಿರಿ. ನೆಹೆಮಿೊಯನು ಒಟ್ಟಾರೆಯಾಗಿ ಕೇಳಿದನು "ನನ್ನ ದೇವರ ಕೃಪಾಹಸ್ತ ಪಾಲನೆ ನನಗಿದ್ದದ್ದರಿಂದ ಅರಸನು ಅವುಗಳನ್ನು ನನಗೆ ಕೊಟ್ಟನು" (ನೆಹೆಮಿೊಯ 2:8). ಆದುದರಿಂದ ದೇವರ ಕೃಪಾಹಸ್ತ ನನ್ನ ಮೇಲೆ ಇದ್ದದ್ದರಿಂದ ಅರಸನು ಎಲ್ಲಾ ಮನವಿಗಳನ್ನು ಲಾಲಿಸಿ ಅಪ್ಪಣೆ ಕೊಟ್ಟನು ಎಂಬುದಾಗಿ ಅವನು ಘೋಷಿಸುತ್ತಾನೆ ಮತ್ತು ನೆಹೆಮಿೊಯನು ಯೆರೂಸಲೇಮಿಗೆ ಬಂದನು ಮತ್ತು ಅವರು ಇದ್ದಂತಹ ನಾಶನವನ್ನು ಮತ್ತು ಯೆರೂಸಲೇಮ ಪಟ್ಟಣ ಹಾಳು ಬಿದ್ದಿರುವುದರ ಕುರಿತು ಹೇಳಿದನು.

**ನೆಹೆಮಿೊಯ 2:18**

**ಇದಲ್ಲದೆ ನನ್ನ ದೇವರ ಕೃಪಾಹಸ್ತವು ನನ್ನನ್ನು ಪಾಲಿಸಿದ್ದನ್ನೂ ಅರಸನು ನನಗೆ ಹೇಳಿದ್ದನ್ನೂ ಅವರಿಗೆ ವಿವರಿಸಿದೆನು. ಆಗ ಅವರು ಬನ್ನಿರಿ, ಕಟ್ಟೋಣ ಎಂದು ಹೇಳಿ ಆ ಒಳ್ಳೇ ಕೆಲಸಕ್ಕೆ ಕೈ ಹಾಕಲು ಧೈರ್ಯಗೊಂಡರು.**

ನೆಹೆಮಿೊಯನು ಈ ರೀತಿಯಾಗಿ ದೇವರ ದಯೆಯನ್ನು ಅನುಭವಿಸಿದನು. ಆದರೆ ಇತರೆ ಜನರಿಗೂ ಆ ದಯೆಯ ಕುರಿತು ಸಾಕ್ಷಿ ಕೊಟ್ಟನು. ಆದ್ದರಿಂದ ಸಾಮಾನ್ಯವಾಗಿ ಜರುಗಿದ್ದೇನೆಂದರೆ, ನೆಹೆಮಿೊಯನ ಮೇಲಿದ್ದ ದೇವರ ದಯೆಯು, ಅವನ ಬಳಿಗೆ ಅನೇಕ ಜನರನ್ನು ಆಕರ್ಷಿಸಿತು. ಇತರ ಜನರು ಸಹ ನೆಹೆಮಿೊಯನೊಡನೆ ಸೇರಿಕೊಳ್ಳಲು ಮತ್ತು ಅವನ ಸೇವೆಯ ಭಾಗವಾಗಲು ಬಯಸಿದರು. ಇಂದಿನ ದಿನದಲ್ಲೂ ನನಗಾಗಿ ಮತ್ತು ನಿಮಗಾಗಿ ದೇವರ ದಯೆಯು ನಿಖರವಾಗಿ ಮಾಡುವಂತದ್ದಾಗಿದೆ.

ನೆಹೆಮಿೂಯನು ದೈವಿಕ ದಯೆಯಲ್ಲಿ ನಡೆದನು ಮತ್ತು ಅಲ್ಲಿ ವಿರೋಧವಿದ್ದಾಗ ಎಲ್ಲರೂ ಸೇರಿ ''ಪರಲೋಕ ದೇವರು ನಮಗೆ ಸಾಫಲ್ಯವನ್ನು ಗ್ರಹಿಸುವನು'' ಆದುದರಿಂದ ಆತನ ಸೇವಕರಾದ ನಾವು ಕಟ್ಟುವುದಕ್ಕೆ ಮನಸ್ಸು ಮಾಡಿದ್ದೇವೆ. (ನೆಹೆಮಿೂಯ 2:20), ಎಂಬುದಾಗಿ ಎದುರಾಳಿಗಳಿಗೆ ಪ್ರತಿಕ್ರಿಯೆ ತೋರುವಂತಹ ಧೈರ್ಯವನ್ನು ಇತರ ಜನರು ಹೃದಯದಲ್ಲಿ ಹೊಂದಿಕೊಂಡರು. ಹೀಗೆ, ಅವರು ದೈವಿಕ ದಯೆಯ ಸುಸಮಯದಲ್ಲಿದ್ದೇವೆ ಎಂಬುದು ಅವರಿಗೆ ಗೊತ್ತಿತ್ತು. ಅವರುಗಳ ಮಧ್ಯದಲ್ಲಿ ದೇವರು ಮಾಡುತ್ತಿರುವಂತವುಗಳನ್ನು ಗುರ್ತಿಸಿದರು. ದೇವರ ದಯೆಯ ಉತ್ತಮವಾದ ಹಸ್ತವು ಅವರ ಮೇಲೆ ಇದೆ ಎಂಬುದಾಗಿ ನಂಬಿದರು ಮತ್ತು ಜನರು ಏನು ಹೇಳಿದ್ದಾರೆ ಎಂಬುದು ವಿಷಯವಲ್ಲ. ಅವರು ಎದ್ದೇಳುತ್ತಾರೆ ಮತ್ತು ಕಟ್ಟುತ್ತಾರೆ.

## ಯೋಸೇಫನು

ಆದಿಕಾಂಡ 39ನೇ ಅಧ್ಯಾಯವು ಐಗುಪ್ತ್ಯ ದೇಶಕ್ಕೆ ತನ್ನ ಸ್ವಂತ ಸಹೋದರರಿಂದ ಗುಲಾಮನಾಗಿ ಮಾರಾಟ ಮಾಡಲ್ಪಟ್ಟಂತಹ ಯೋಸೇಫನ ಕಥೆಯ ಕುರಿತು ವ್ಯಾಖ್ಯಾನಿಸುತ್ತದೆ. ಅಲ್ಲಿ ಪೋಟೀಫರನ ಮನೆಯಲ್ಲಿ ಸೇವೆ ಮಾಡಿದನು. ನಂತರ ಅವನನ್ನು ಸೆರೆಮನೆಗೆ ಹಾಕಲಾಯಿತು.

**ಆದಿಕಾಂಡ 39:21, 22**

**ಆದರೂ ಯೆಹೋವನು ಯೋಸೇಫನ ಸಂಗಡ ಇದ್ದು ಅವನ ಮೇಲೆ ಕೃಪೆಯನ್ನಿಟ್ಟು ಅವನಿಗೆ ಸೆರೆಯಾಗಿ ಯಜಮಾನನ ಬಳಿಯಲ್ಲಿ ದಯೆ ದೊರಕುವಂತೆ ಮಾಡಿದನು. ಸೆರೆಮನೆಯ ಯಜಮಾನನು ಸೆರೆಯಲ್ಲಿದ್ದವರೆಲ್ಲರನ್ನೂ ಯೋಸೇಫನ ವಶಕ್ಕೆ ಕೊಟ್ಟು ಬಿಟ್ಟನು. ಅಲ್ಲಿ ಮಾಡಬೇಕಾದದ್ದನ್ನೆಲ್ಲಾ ಯೋಸೇಫನೇ ಮಾಡಿಸಿದನು.**

ಸೆರೆಮನೆಯಲ್ಲಿಯು ಸಹ, ಸೆರೆಮನೆಯ ಕಾವಲುಗಾರನು ಯೋಸೇಫನು ಉಸ್ತುವಾರಿ ನೋಡಿಕೊಳ್ಳುವಂತೆ ಕೇಳಿಕೊಂಡನು. ಇದು ದೈವಿಕ ದಯೆ. ಯೋಸೇಫನು ಸ್ವತಹ ತಾನೇ ಮತ್ತು ಇತರ ಖೈದಿಗಳೆಲ್ಲರೂ ಹೊರಗೆ ಹೋಗುತ್ತಾರೆ ಎಂಬುದಾಗಿ ಸೆರೆಯ ಕಾವಲುಗಾರನು ಯೋಚಿಸಲೇ ಇಲ್ಲ. ಖೈದಿಯು, ತನ್ನ ಸ್ವಂತ ಖೈದಿಯಾದವನಿಗೆ ಬಂಧನ ಕೋಣೆಯ ಉಸ್ತುವಾರಿಯಾಗಿರುವುದನ್ನು ಊಹಿಸಿಕೊಳ್ಳಿರಿ.

**ಅಪೊಸ್ತಲರ ಕೃತ್ಯಗಳು 7:9, 10**
**ಮೂಲ ಪಿತೃಗಳು ಹೊಟ್ಟೆಕಿಚ್ಚಿನಿಂದ ಯೋಸೇಫನನ್ನು ಐಗುಪ್ತ ದೇಶಕ್ಕೆ ಮಾರಿಬಿಟ್ಟರು. ಅಲ್ಲಿ ದೇವರು ಅವನ ಸಂಗಡ ಇದ್ದು ಅವನಿಗೆ ಬಂದ ಎಲ್ಲಾ ಸಂಕಟಗಳಿಂದ ಅವನನ್ನು ಬಿಡಿಸಿ ಐಗುಪ್ತ ದೇಶದ ಅರಸನಾದ ಫರೋಹನ ಸಮ್ಮುಖದಲ್ಲಿ ದಯಾಪಾತ್ರನೂ, ಜ್ಞಾನವುಳ್ಳವನೂ ಆಗಿರುವಂತೆ ಅನುಗ್ರಹಿಸಿದನು. ಫರೋಹನು ಅವನನ್ನು ಐಗುಪ್ತ ದೇಶದ ಮೇಲೆಯೂ ತನ್ನ ಎಲ್ಲಾ ಮನೆಯ ಮೇಲೆಯೂ ಅಧಿಕಾರಿಯಾಗಿ ಇಟ್ಟನು.**

ದೇವರು ಯೋಸೇಫನಿಗೆ ದಯೆಯನ್ನು ಅನುಗ್ರಹಿಸಿದನು ಮತ್ತು ಒಂದೇ ರಾತ್ರಿಯಲ್ಲಿ ಅವನು ಖೈದಿಯಾಗಿದ್ದವನು ಐಗುಪ್ತ ದೇಶದ ಪ್ರಧಾನ ಮಂತ್ರಿಯಾದನು. ನಮ್ಮ ಜೀವಿತಗಳಲ್ಲಿ ದೇವರ ದಯೆಯು ಇದನ್ನು ಮಾಡುವಂತದ್ದಾಗಿದೆ. ಕ್ಷಣ ಮಾತ್ರದಲ್ಲಿ ಎಲ್ಲವೂ ಬದಲಾಗುತ್ತದೆ.

## ಐಗುಪ್ತದಲ್ಲಿನ ಇಸ್ರಾಯೇಲ ಜನರು

ಇಸ್ರಾಯೇಲ ಜನರು 400 ವರ್ಷಗಳು ಐಗುಪ್ತದಲ್ಲಿ ಗುಲಾಮರಾಗಿದ್ದರು. ದೇವರು ಮೋಶೆಯೊಂದಿಗೆ ಅವನ ಪ್ರಾರಂಭದ ಸೇವೆಯ ಸಮಯದಲ್ಲಿ ''ಈ ನನ್ನ ಜನರಿಗೆ ಐಗುಪ್ತ್ಯರ ದಯೆ ದೊರಕುವಂತೆ ಮಾಡುವೆನು. ಆದುದರಿಂದ ನೀವು ಹೊರಡುವಾಗ ಬರಿಗೈಲಿ ಹೋಗುವುದಿಲ್ಲ. ನಿಮ್ಮಲ್ಲಿ ಪ್ರತಿ ಸ್ತ್ರೀಯು ನೆರೆ ಹೆಂಗಸರಿಂದಲೂ, ನಿಮ್ಮ ಮನೆಯಲ್ಲಿ ಇಳುಕೊಂಡ ಹೆಂಗಸರಿಂದಲೂ ಬೆಳ್ಳಿ, ಬಂಗಾರದ ಒಡವೆಗಳನ್ನೂ, ಬಟ್ಟೆಗಳನ್ನೂ ಕೇಳಿಕೊಳ್ಳಲಿ. ನೀವು ಅವುಗಳನ್ನು ನಿಮ್ಮ ಗಂಡು, ಹೆಣ್ಣು ಮಕ್ಕಳಿಗೆ ಇಡಿರಿ. ಇದರಿಂದ ಐಗುಪ್ತ್ಯರನ್ನು ಸೂರೆ ಮಾಡುವಿರಿ ಅಂದನು'' (ವಿಮೋಚನ ಕಾಂಡ 3:21, 22) ಹೀಗೆ ಹೇಳಿದನು. ಇಷ್ಟು ವರ್ಷಗಳು ಇಸ್ರಾಯೇಲ್ಯರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದ ಐಗುಪ್ತ್ಯರ ದೃಷ್ಟಿಯಲ್ಲಿ ಇಸ್ರಾಯೇಲ್ಯರಿಗೆ ದಯೆಯನ್ನು ದೊರಕಿಸಿ ಕೊಡುವುದಾಗಿ ಮೋಶೆಗೆ ದೇವರು ಹೇಳಿದನು. ದೇವರು ಮೋಶೆಗೆ, ಐಗುಪ್ತ್ಯದಿಂದ ಜನರನ್ನು ಹೊರಗೆ ಕರೆದುಕೊಂಡು ಬರುವ ಸಮಯ ಬರುವಾಗ ಮೋಶೆಯು ಅವರನ್ನು ವಾಗ್ದಾನದ ದೇಶಕ್ಕೆ ಮುನ್ನಡೆಸಬೇಕೆಂಬುದಾಗಿ ಹೇಳಿದನು. ದೇವರ ದಯೆಯು ಇಸ್ರಾಯೇಲ್ಯರ ಮೇಲಿರುವುದರಿಂದ ಅವರು ಬರಿಗೈಯಲ್ಲಿ ಹಿಂತಿರುಗುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಮೋಶೆಗೆ ಹೇಳಿದನು.

**ವಿಮೋಚನಾ ಕಾಂಡ 11:3**
**ಯೆಹೋವನು ಇಸ್ರಾಯೇಲ್ಯರ ಮೇಲೆ ಐಗುಪ್ತ್ಯದಲ್ಲಿ ದಯೆಯನ್ನು ಹುಟ್ಟಿಸಿದನು. ಇದಲ್ಲದೆ ಐಗುಪ್ತ್ಯ ದೇಶದಲ್ಲಿ ಫರೋಹನ ಪ್ರಜಾ ಪರಿವಾರದವರು ಆ ಮೋಶೆಯನ್ನು ಮಹಾ ಪುರುಷನೆಂದು ತಿಳಿದುಕೊಂಡರು.**

ಇದ್ದಕ್ಕಿದ್ದಂತೆ ಐಗುಪ್ತ್ಯರ ಅಭಿಪ್ರಾಯಗಳು, ದೃಷ್ಟಿಕೋನಗಳು ಮತ್ತು ಅವರು ಇಸ್ರಾಯೇಲ್ಯರಿಗೆ ಮಾಡಬೇಕೆಂಬುದಾಗಿ ಅಂದುಕೊಂಡಿದ್ದೆಲ್ಲವೂ ಬದಲಾಯಿತು. ಕರ್ತನು ಇಸ್ರಾಯೇಲ್ಯರಿಗೆ ಐಗುಪ್ತ್ಯರಲ್ಲಿ ದಯೆಯನ್ನು ಹುಟ್ಟಿಸಿದನು. ಅಷ್ಟೇ, ಎಲ್ಲವೂ ಬದಲಾಯಿತು!

**ವಿಮೋಚನಕಾಂಡ 12:3-37**

**ಇಸ್ರಾಯೇಲ್ಯರು ಮೋಶೆಯ ಮಾತಿನ ಮೇರೆಗೆ ಐಗುಪ್ತ್ಯರಿಂದ ಬೆಳ್ಳಿ ಬಂಗಾರದ ಒಡವೆಗಳನ್ನೂ, ಬಟ್ಟೆಗಳನ್ನೂ ಕೇಳಿಕೊಂಡರು. ಯೆಹೋವನು ಅವರ ಮೇಲೆ ಐಗುಪ್ತ್ಯರಲ್ಲಿ ದಯೆಯನ್ನು ಹುಟ್ಟಿಸಿದ್ದರಿಂದ ಅವರು ಕೇಳಿಕೊಂಡದ್ದನ್ನು ಕೊಟ್ಟರು. ಹೀಗೆ ಇಸ್ರಾಯೇಲ್ಯರು ಐಗುಪ್ತ್ಯರ ಸೊತ್ತನ್ನು ಸುಲುಕೊಂಡರು. ಇಸ್ರಾಯೇಲ್ಯರು ರಮ್ಸೇಸ್ ಪಟ್ಟಣದಿಂದ ಹೊರಟು ಸುಕ್ಕೋತಿಗೆ ಬಂದರು. ಹೆಂಗಸರೂ, ಮಕ್ಕಳೂ ಅಲ್ಲದೆ ಅವರ ಕಾಲ್ಬಲವೇ ಸುಮಾರು ಆರು ಲಕ್ಷ ಗಂಡಸರು.**

ಅಲ್ಲದೆ, ದೈವಿಕ ದಯೆಯ ನಿಮಿತ್ತದಿಂದ, ಅಲ್ಲದೆ ಐಗುಪ್ತ್ಯರ ದೃಷ್ಟಿಯಲ್ಲಿನ ದೈವಿಕ ದಯೆಯ ನಿಮಿತ್ತದಿಂದ ಅವರು ಸಂತೋಷಗೊಳಿಸುವಂತದ್ದೆಲ್ಲವನ್ನು ಇಸ್ರಾಯೇಲ್ಯರಿಗೆ ಐಗುಪ್ತ್ಯರು ಅನುಗ್ರಹಿಸಿದರು. ಆದ್ದರಿಂದ ಅವರು ಅಕ್ಷರಶಃ ಐಗುಪ್ತ್ಯರನ್ನು ಲೂಟಿ ಮಾಡಿದರು. ನಿಮ್ಮ ''ಮನೆ ಸಹಾಯಕಿ'' ಬಂದು ನಿಮ್ಮ ಚಿನ್ನ ಮತ್ತು ಬಟ್ಟೆಗಳೆಲ್ಲವನ್ನು ಅವಳಿಗೆ ಕೊಡಬೇಕೆಂಬುದಾಗಿ ನಿಮ್ಮಲ್ಲಿ ಕೇಳುವುದನ್ನು ಊಹಿಸಿಕೊಳ್ಳಿರಿ. ಅವಳು ತನ್ನ ಮನಸ್ಸಿನಿಂದ ದೂರವಾದವಳು ಎಂಬುದಾಗಿ ನೀವು ಭಾವಿಸುತ್ತೀರಿ. ಆದರೆ 400 ವರ್ಷಗಳ ದಾಸತ್ವದ ನಂತರ ಇಸ್ರಾಯೇಲ್ಯರು ಐಗುಪ್ತ್ಯರನ್ನು ಖಚಿತವಾಗಿ ಕೇಳಿದ್ದು ಇದೆ. ದೈವಿಕ ದಯೆಯು ಕ್ಷಣದಲ್ಲಿ ಐಶ್ವರ್ಯವೆಲ್ಲವೂ ಐಗುಪ್ತ್ಯರ ಕೈಯಿಂದ ಈಸ್ರಾಯೇಲ್ಯರ ಕೈಗೆ ವರ್ಗಾಯಿಸಲ್ಪಟ್ಟಿತು. ಇದೆಲ್ಲವೂ ಒಂದು ರಾತ್ರಿಯಲ್ಲಿ ಜರುಗಿತ್ತು.

ಈ ದಿನದಲ್ಲಿ ದೇವರು ಅದನ್ನು ನನಗೂ, ಮತ್ತು ನಿಮಗೂ ಮಾಡುತ್ತಾನೆಂಬುದಾಗಿ ನಂಬುತ್ತೀರೋ? ದೇವರು ನನ್ನ ಮತ್ತು ನಿಮ್ಮ ಜೀವಿತಗಳಿಗೆ ದೈವಿಕ ದಯೆ ಕ್ಷಣಗಳು ಅಥವಾ ದೈವಿಕ ದಯೆಯ ಋತುಗಳನ್ನು ಕಳುಹಿಸುತ್ತಾನೆ ಎಂಬುದಾಗಿ ನಂಬುತ್ತೀರೋ? ದೇವರು ಮಾಡಲೂ ಶಕ್ತನು ಎಂಬುದಾಗಿ ನಾನು ನಂಬುತ್ತೇನೆ! ಸಮಯಗಳು ಬದಲಾಗಿವೆ. ಜನರು ಬದಲಾಗಿದ್ದಾರೆ. ಆದರೆ ನಮ್ಮ ದೇವರು ಆತನ ಜನರ ಮೇಲೆ ದೈವಿಕ ದಯೆಯನ್ನು ನಿರಂತರವಾಗಿ ಕಳುಹಿಸುತ್ತಿರುವಂತಹ ದೇವರಾಗಿದ್ದಾನೆ. ಆತನ ಜನರಿಗೆ ಆತನು ದಯೆ ತೋರಿಸುತ್ತಾನೆ ಮತ್ತು ಇಲ್ಲದಿದ್ದರೆ ಎಂದಿಗೂ ಜರುಗದಂತಹ ವಿಷಯಗಳು ಜರುಗುವಂತೆ ಕಾರಣವಾಗಿ ಮಾಡುತ್ತಾನೆ.

# 2

# ದೈವಿಕ ದಯೆ ನಿಮ್ಮ ಮೇಲಿರುವಾಗ ಏನು ಸಂಭವಿಸುತ್ತದೆ?

### ಜನರ ಮಧ್ಯದಲ್ಲಿ ಪ್ರಭಾವವಿರುತ್ತದೆ

ದೈವಿಕ ದಯೆಯು ನಮಗೆ ಜನರಲ್ಲಿ ಪ್ರಭಾವ ಬೀರುತ್ತದೆ. ನೆಹೆಮಿಯನು ಯಾರು ಅಲ್ಲದವನು, ಯೋಸೇಫ ಖೈದಿಯಾಗಿದ್ದನು. ಇಸ್ರಾಯೇಲ್ಯರು ದಾಸತ್ವದಲ್ಲಿದ್ದರು. ಆದರೆ ದೇವರ ದಯೆಯು ಅವರ ಮೇಲಿರುವಾಗ ಅವರು ಪ್ರಭಾವವನ್ನು ಸಂಪಾದಿಸಿದರು. ಅವರು ಮಾತನಾಡಿದರು ಮತ್ತು ವಿಷಯಗಳು ಅವರ ದಯೆಯಲ್ಲಿ ಜರುಗಿದವು.

### ಜನರು, ಸ್ಥಳಗಳು ಅಥವಾ ವಿಷಯಗಳಿಗೆ ಪ್ರವೇಶ

ದೇವರ ದಯೆಯು ಜನರು, ಸ್ಥಳಗಳು ಮತ್ತು ಸಂಗತಿಗಳಿಗೆ ಪ್ರವೇಶ ಕೊಡುತ್ತದೆ. ತಕ್ಷಣವಾಗಿ ಆತನು ನಮ್ಮ ಮೇಲೆ ದೈವಿಕ ದಯೆಯನ್ನು ಬಿಡುಗಡೆ ಮಾಡುವಾಗ ಸರಿಯಾದ ಜನರು, ಸರಿಯಾದ ಸ್ಥಳಗಳು, ವಿಷಯಗಳ ಅಥವಾ ಐಶ್ವರ್ಯಕ್ಕೆ ದೇವರು ನಮಗೆ ಪ್ರವೇಶ ಕೊಡುತ್ತಾನೆ.

### ಅಸ್ವಾಭಾವಿಕ ಅವಕಾಶಗಳು

ದೇವರ ದಯೆಯು ಇತರರು ಹೊಂದಿರದಂತಹ ಅವಕಾಶಗಳನ್ನು ಅಸ್ವಾಭಾವಿಕ ಅವಕಾಶಗಳನ್ನು ನಮಗೆ ತರುತ್ತದೆ.

### ಉತ್ಕೃಷ್ಟತೆ ತರುತ್ತದೆ

**ಕೀರ್ತನೆಗಳು 89:17**

**ಅವರು ಹಿಗ್ಗುವ ಬಲವು ನೀನೇ. ನಿನ್ನ ಕರುಣಾಕಟಾಕ್ಷದಿಂದ ನಮ್ಮ ಕೊಂಬು ಎತ್ತಲ್ಪಟ್ಟಿರುವದು.**

'ಕೊಂಬು' ಎಂಬ ಪದದ ಅರ್ಥವು 'ನಾಯಕ' ಎಂಬುದಾಗಿದೆ. ದೇವರ ದಯೆಯು ಉತ್ಕೃಷ್ಟತೆಯನ್ನು ತರುತ್ತದೆ.

## ಜೀವಿತ ಬಿಡುಗಡೆಗೊಳಿಸುತ್ತದೆ

ಆತನ ದಯೆಯನ್ನು ದೇವರು ಬಿಡುಗಡೆ ಮಾಡುವಾಗ ಸಾಯುತ್ತಿರುವಂತದ್ದು ತಕ್ಷಣವಾಗಿ ಜೀವಿತಕ್ಕೆ ಬರುತ್ತದೆ. ದೇವರ ದಯೆಯು ನಮ್ಮ ಮೇಲೆ ಬಿಡುಗಡೆಗೊಳ್ಳುವಾಗ ನಮ್ಮ ಜೀವಿತದಲ್ಲಿನ ಕಠಿಣ ಪರಿಸ್ಥಿತಿಗಳು ತಿರುಗಿ ಬಿಡುತ್ತವೆ.

**ಕೀರ್ತನೆಗಳು 30:5**
**ಆತನ ಕೋಪವು ಕ್ಷಣ ಮಾತ್ರವೇ, ಆತನ ಅನುಗ್ರಹವೋ ಜೀವಮಾನವೆಲ್ಲ ಇರುವದು, ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳುಕೊಂಡರೂ ಮುಂಜಾನೆ ಹರ್ಷ ಧ್ವನಿಯು ಕೇಳಿಸುವದು.**

**ಕೀರ್ತನೆಗಳು 30:11**
**ಆಗ ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದಿ; ನಾನು ಕಟ್ಟಿಕೊಂಡಿದ್ದ ಗೋಣಿತಟ್ಟನ್ನು ತೆಗೆದುಬಿಟ್ಟು ಹರ್ಷ ವಸ್ತ್ರವನ್ನು ನನಗೆ ಧಾರಣೆ ಮಾಡಿಸಿದಿ.**

# 3

# ದೇವರ ದಯೆಯ ನಮ್ಮ ಮೇಲೆ ಬರಲು ಏನು ಕಾರಣವಾಗುತ್ತದೆ?

ಒಬ್ಬ ವ್ಯಕ್ತಿಯ ಜೀವಿತಕ ಮೇಲೆ ದೈವಿಕ ದಯೆಯು ಬಿಡುಗಡೆಗೊಳ್ಳಲು ಏನು ಕಾರಣವಾಗಬಹುದು? ನಿರ್ದಿಷ್ಟವಾದ ಸಮಯದಲ್ಲಿ ನಿರ್ದಿಷ್ಟವಾದ ಜನರ ಮೇಲೆ ಏಕೆ ದೇವರ ದಯೆಯು ಬರುತ್ತದೆ. ದೇವರ ವಚನಗಳನ್ನು ಅಧ್ಯಯನ ಮಾಡುವುದರಿಂದ ನಾನು ಗುರ್ತಿಸಿದ ಕೆಲವು ಉತ್ತರಗಳು ಇಲ್ಲಿವೆ.

## ನಮ್ಮ ಕಾರ್ಯ ನಿಯೋಜನೆಗೆ ದಯೆಯು ಸಂಪರ್ಕಿಸಲ್ಪಟ್ಟಿದೆ

ನಮ್ಮ ಕಾರ್ಯ ನಿಯೋಜನೆಗೆ ದೇವರ ದಯೆಯು ಯಾವಾಗಲೂ ಸಂಪರ್ಕಿಸಲ್ಪಟ್ಟಿದೆ. ನಮ್ಮಲ್ಲಿ ಪ್ರತಿಯೊಬ್ಬರಿಗೂ ದೇವರಿಂದ ಒಂದು ನಿಯೋಜನೆಯಿದೆ ಮತ್ತು ನಮ್ಮ ನಿಯೋಜನೆಗೆ ನಾವು ಚಲಿಸುವಾಗ ನಮ್ಮ ಮೇಲೆ ದೇವರ ದಯೆಯು ಬರುತ್ತದೆ. ಸತ್ಯವೇದದಿಂದ ಕೆಲವು ಉದಾಹರಣೆಗಳು ಇಲ್ಲಿವೆ:

### ಮರಿಯಳು

**ಲೂಕ 1:30**

**ಆ ದೂತನು ಆಕೆಗೆ, ಮರಿಯಳೇ ಹೆದರಬೇಡ, ನಿನಗೆ ದೇವರ ದಯೆ ದೊರಕಿತು.**

ಮೆಸ್ಸೀಯನ ಜನನಕ್ಕಾಗಿ ದೇವರು ಯಾವುದೇ ಕನ್ಯೆಯನ್ನು ಸಾಧನವಾಗಿ ಆರಿಸಿಕೊಳ್ಳಬಹುದಿತ್ತು. ಆದರೆ ಆತನು ಮರಿಯಳನ್ನು ಆರಿಸಿಕೊಂಡನು. ಮೆಸ್ಸೀಯನ ಜನನದ ಒಂದು ನಿರ್ದಿಷ್ಟ ಕಾರ್ಯ ನಿಯೋಜನೆಗಾಗಿ ಆಕೆಯು ''ದಯೆ ಹೊಂದಿದವಳಾದಳು.''

### ಯೇಸು

**ಲೂಕ 2:52**

**ಯೇಸು ಜ್ಞಾನದಲ್ಲಿಯೂ, ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು. ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು.**

## ನೆಹೆಮಿಯ

ನೆಹೆಮಿಯನು ಏಕೆ ದೇವರ ದಯೆಯನ್ನು ಅನುಭವಿಸಿದನು? ಯೆರೂಸಲೇಮಿನ ಗೋಡೆಯನ್ನು ತಿರುಗಿ ಕಟ್ಟುವಂತಹ ಕಾರ್ಯಕ್ಕೆ ಅವನು ಮುನ್ನಡೆದವನಾದನು ಮತ್ತು ನೆಹೆಮಿಯನು ದೈವಿಕ ದಯೆ ಅನುಭವಿಸಿದನು.

## ಯೋಸೇಫನು

ಯೋಸೇಫನು ಯಾಕೆ ದೇವರ ದಯೆ ಹೊಂದಿದ್ದನು? ಪ್ರಧಾನ ಮಂತ್ರಿಯಾಗುವ ಕಾರ್ಯ ನಿಯೋಜನೆಯಲ್ಲಿ ಅವನ ಜನರ ಬಿಡುಗಡೆಗಾಗಿ, ಅವನ ಕನಸ್ಸು ನೆರವೇರಿಕೆಗಾಗಿ ಅವನು ಚಲಿಸಿದನು.

## ಎಸ್ತೇರಳು

ಎಸ್ತೇರಳು ಯೆಹೂದಿ ಜನರಿಗೆ ಬಿಡುಗಡೆಯನ್ನು ತರುವಂತಹ ಕಾರ್ಯ ನಿಯೋಜನೆ ಹೊಂದಿದ್ದರ ನಿಮಿತ್ತದಿಂದ ದೇವರ ದಯೆಯನ್ನು ಅನುಭವಿಸಿದಳು. ಎಸ್ತೇರಳು ಕೇವಲ ಯಾರೂ ಅಲ್ಲ ಎಂಬ ಲೆಕ್ಕಕ್ಕೆ ಬಾರದಂತಹ ಜೀವಿತ ಹೊಂದಿದ್ದಂತಹ ಅನಾಥಳಾಗಿದ್ದಳು. ಆದರೆ ದೇವರ ದಯೆಯು ಆಕೆಯ ಮೇಲಿರುವಾಗ, ಅರಸನಾದ ಅಹಷ್ವೇರೋಷನ ರಾಣಿಯಾಗಿ ಆಯ್ಕೆಗೊಂಡಳು ಮತ್ತು ಸರಿಯಾದ ಸಮಯದಲ್ಲಿ, ಅರಸನ ಬಳಿ ಮನವಿ ಮಾಡಲು ಹೋದಾಗ ಅರಸನು ಆಸ್ಥಾನದಲ್ಲಿ ಆಕೆ ನಿಂತಿರುವುದನ್ನು ನೋಡಿದನು ಮತ್ತು ಆಕೆಯು ಅವನ ದೃಷ್ಟಿಯಲ್ಲಿ ದಯೆಯನ್ನು ಹೊಂದಿದ್ದಳು. ಆದ್ದರಿಂದ ಅರಸನು ತನ್ನ ಕೈಯಲ್ಲಿದ್ದ ಸುವರ್ಣ ದಂಡವನ್ನು ಆಕೆಯ ಕಡೆಗೆ ಚಾಚಿದನು. ಎಸ್ತೇರಳು ಸಮೀಪಕ್ಕೆ ಹೋಗಿ ದಂಡದ ತುದಿಯನ್ನು ಮುಟ್ಟಿದಳು. ಅರಸನು ಆಕೆಗೆ ಎಸ್ತೇರ ರಾಣಿಯೇ ನಿನಗೇನು ಬೇಕು? ನಿನ್ನ ವಿಜ್ಞಾಪನೆ ಯಾವದು? ನನ್ನ ಅರ್ಧ ರಾಜ್ಯವನ್ನು ಕೇಳಿದರೂ ನಿನಗೆ ಕೊಡುತ್ತೇನೆ ಅಂದನು!'' ಎಸ್ತೇರಳು ಒಂದು ನಿರ್ದಿಷ್ಟ ಕಾರ್ಯ ನಿಯೋಜನೆಯನ್ನು ನೆರವೇರಿಸುತ್ತಿದ್ದುದ್ದರಿಂದ ದೇವರ ದಯೆಯು ಆಕೆಯ ಮೇಲಿತ್ತು. ದೇವರ ಜನರಿಗೆ ಬಿಡುಗಡೆಯನ್ನು ತರುವ ಕಾರ್ಯ ನಿಯೋಜನೆಯನ್ನು ಸಾಧಿಸುತ್ತಿರುವಂತದ್ದನು. ತದನಂತರದಲ್ಲಿ ಎಸ್ತೇರಳು ಅರಿತುಕೊಂಡಳು.

ಆದ್ದರಿಂದ ನಾವುಗಳು ನಮ್ಮ ಕಾರ್ಯ ನಿಯೋಜನೆಯ ಮಧ್ಯದಲ್ಲಿರುವಾಗ ದೇವರ ದಯೆಯು ನಮ್ಮ ಮೇಲಿರುತ್ತದೆ. ಇದರ ಅರ್ಥವೇನೆಂದರೆ, ನಮ್ಮ ಸ್ವಂತ ಕಾರ್ಯ ನಿಯೋಜನೆಗಳನ್ನು ನಾವು ಮಾಡುತ್ತಿದ್ದರೆ ಅದು ದೇವರ ದಯೆಯ ಕ್ಷಣಗಳನ್ನು ಪಡೆದುಕೊಳ್ಳುವುದನ್ನು ನಮಗೆ ಅನರ್ಹಗೊಳಿಸುತ್ತದೆ. ಹಾಗಿದ್ದರೂ ನಾವು ದೇವರ ಕಾರ್ಯ ನಿಯೋಜನೆಯನ್ನು ಆತನು ನೆರವೇರಿಸುವುದಕ್ಕಾಗಿ ದೇವರು ದಯೆಯನ್ನು ಬಿಡುಗಡೆಗೊಳಿಸುತ್ತಾನೆ. ಅದಕ್ಕಾಗಿಯೇ ಕೆಲವು ಸಮಯಗಳಲ್ಲಿ ಅನಿರೀಕ್ಷಿತವಾಗಿ ಬಾಗಿಲುಗಳು ತೆರೆಯುತ್ತವೆ ಮತ್ತು ಬೇರೆಯವರು ಪ್ರವೇಶ ಹೊಂದದಿರುವಂತಹ ವಿಷಯಗಳು ಮತ್ತು ಸ್ಥಳಗಳು, ಜನರುಗಳಿಗೆ ನಾವು ಪ್ರವೇಶ ಪಡೆಯುತ್ತೇವೆ. ಕೆಲವು ಸಮಯಗಳಲ್ಲಿ ನಮ್ಮ ಕೈಗೆ ಐಶ್ವರ್ಯದ ವರ್ಗಾವಣೆಯನ್ನು ನಾವು ಗುರ್ತಿಸುತ್ತೇವೆ.

ಇತರೆ ಸಮಯಗಳಲ್ಲಿ "ಆ ಸೇವೆಯ ಭಾಗಗಳಾಗಿರಲು ನಾವು ಅಪೇಕ್ಷಿಸುತ್ತೇವೆ" ಎಂಬುದಾಗಿ ಜನರು ಹೇಳುವಂತಹ ಸ್ಥಿತಿಗೆ ನಮ್ಮ ಪ್ರಭಾವದ ಕೆಳಗೆ ಬರುವುದನ್ನು ನಾವು ಗುರ್ತಿಸುತ್ತೇವೆ. ಇದು ನಮ್ಮ ಜೀವಿತಗಳ ಮೇಲೆ ದೈವಿಕ ದಯೆಯು ಸುರಿಸಲ್ಪಡುವಂತದ್ದಾಗಿರುತ್ತದೆ.

ಆದರೆ, ದೈವಿಕ ದಯೆಯ ಋತುಗಳು ಮತ್ತು ಕ್ಷಣಗಳ ನಂತರವು ಸಹ ನಮಗೆ ದೇವರು ಕೊಟ್ಟಂತಹ ಕಾರ್ಯ ನಿಯೋಜನೆಯ ಕಡೆಗೆ ಸ್ವಾಭಾವಿಕ ಕಾರ್ಯ ಮಾಡಬೇಕು ಮತ್ತು ನಿರಂತರವಾಗಿ ದುಡಿಯಬೇಕೆಂಬುದನ್ನು ನಮ್ಮ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನೆಹೆಮೀಯನ ಎಲ್ಲಾ ವಿಜ್ಞಾಪನೆಗಳನ್ನು ಲಾಲಿಸಿ ಅರಸನು ಅನುಗ್ರಹಿಸಿದ್ದು ದೈವಿಕ ದಯೆಯ ಕ್ಷಣಗಳಾಗಿದ್ದವು. ಆದರೆ ನೆಹೆಮೀಯನು ಅದನ್ನು ಅನುಸರಿಸಬೇಕಾಗಿತ್ತು ಮತ್ತು ಆಂತರಿಕ ತೊಂದರೆಗಳು, ತಪ್ಪಾದ ಆರೋಪಗಳು ಬಹಳಷ್ಟು ವಿರೋಧಗಳ ಹಿಂದೆ ಕಾರ್ಯ ನಿಯೋಜನೆಯು ಪೂರ್ಣಗೊಳ್ಳುವುದನ್ನು ನೋಡುವವರೆಗೂ ಪರಿಶ್ರಮದಿಂದ ಕೆಲಸ ಮಾಡಬೇಕಾಯಿತು.

ನಿಮ್ಮ ಜೀವಿತದ ಮೇಲೆ ಬಿಡುಗಡೆಗೊಂಡ ದೇವರ ದಯೆಯನ್ನು ವ್ಯರ್ಥ ಮಾಡಿಕೊಳ್ಳದಂತೆ ಬಹಳ ಜಾಗರೂಕರಾಗಿರಿ. ಸೌಲನು ಅವನ ಮೇಲೆ ತೋರಿಸಲ್ಪಟ್ಟಂತಹ ಉತ್ತಮವಾದ ದೇವರ ದಯೆಯನ್ನು ವ್ಯರ್ಥ ಮಾಡಿಕೊಂಡನು ಮತ್ತು ದಾವೀದನೆಂಬ ಮತ್ತೊಬ್ಬನನ್ನು ಕಾರ್ಯ ನಿಯೋಜನೆಯನ್ನು ನೆರವೇರಿಸಲು ದೇವರು ಗುರ್ತಿಸಿದನು.

**1 ಸಮುವೇಲನು 15:10, 11, 16-22**

**ಯೆಹೋವನು ಸಮುವೇಲನಿಗೆ ಸೌಲನನ್ನು ಅರಸನನ್ನಾಗಿ ಮಾಡಿದ್ದಕ್ಕೆ ಈಗ ಪಶ್ಚಾತ್ತಾಪ ಪಡುತ್ತೇನೆ. ಅವನು ನನ್ನನ್ನು ಬಿಟ್ಟು ಬಿಟ್ಟನು. ನನ್ನ ಆಜ್ಞೆಗಳನ್ನು ನೆರವೇರಿಸುವುದಿಲ್ಲ ಎಂದು ಹೇಳಲು ಸಮುವೇಲನು ಕೋಪಗೊಂಡು ರಾತ್ರಿಯೆಲ್ಲಾ ಆತನಿಗೆ ಮೊರೆಯಿಟ್ಟನು. ಆಗ ಸಮುವೇಲನು ಅವನಿಗೆ ಆದಿರಲಿ ಯೆಹೋವನು ಕಳೆದ ರಾತ್ರಿಯಲ್ಲಿ ನನಗೆ ಹೇಳಿದ್ದನ್ನು ತಿಳಿಸುತ್ತೇನೆ ಕೇಳು ಅನ್ನಲು ಅವನು ಹೇಳು ಅಂದನು. ಸಮವೇಲನು ನೀನು ನಿನ್ನ ದೃಷ್ಟಿಯಲ್ಲಿ ಅಲ್ಪನಾಗಿದ್ದರೂ ಯೆಹೋವನು ನಿನಗೆ ಇಸ್ರಾಯೇಲ್ಯರಲ್ಲಿ ರಾಜ್ಯಾಭಿಷೇಕ ಮಾಡಿದ್ದರಿಂದ ನೀನು ಎಲ್ಲಾ ಕುಲಗಳಿಗೆ ಶಿರಸ್ಸಾದಿ. ಆತನು ನಿನಗೆ ಹೊರಟುಹೋಗಿ ದುಷ್ಟರಾದ ಅಮಾಲೇಕ್ಯರೊಡನೆ ಯುದ್ಧಮಾಡಿ ಅವರೆಲ್ಲರನ್ನೂ ಸಂಪೂರ್ಣವಾಗಿ ನಾಶ ಮಾಡಲಿ ಎಂದು ಹೇಳಿದನು. ಆದರೆ ನೀನು ಯೆಹೋವನ ಮಾತನ್ನು ಕೇಳದೆ ಕೊಳ್ಳೆಗಾಗಿ ಎರಗಿ ಆತನಿಗೆ ದ್ರೋಹ ಮಾಡಿದ್ದೇಕೆ ಅಂದನು. ಆಗ ಸೌಲನು ಸಮವೇಲನಿಗೆ, "ಏನು? ನಾನು ಯೆಹೋವನ ಮಾತನ್ನು ಕೇಳಲಿಲ್ಲವೋ? ಆತನು ಕಳುಹಿಸಿದಲ್ಲಿಗೆ ಹೋಗಿ ಅಮಾಲೇಕ್ಯರನ್ನೆಲ್ಲಾ ಸಂಹರಿಸಿ ಅವರ ಅರಸನಾದ ಅಗಾಗನನ್ನು ಹಿಡಿದು ತಂದೆನು. ಆದರೆ ಜನರು ಸಂಪೂರ್ಣವಾಗಿ ಸಂಹರಿಸಿ ಬೇಕಾದ ಕೊಳ್ಳೆಯಲ್ಲಿ ಉತ್ತಮವಾದ ಕುರಿದನಗಳನ್ನು ನಿನ್ನ ದೇವರಾದ ಯೆಹೋವನಿಗೆ ಗಿಲ್ಗಾಲಿನಲ್ಲಿ ಯಜ್ಞಾರ್ಪಣೆ ಮಾಡುವುದಕ್ಕಾಗಿ ಉಳಿಸಿ ತಂದರು" ಎಂದು ಉತ್ತರ ಕೊಟ್ಟನು. ಅದಕ್ಕೆ ಸಮುವೇಲನು ಯೆಹೋವನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನರ್ಪಿಸುವದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ. ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ.**

## ದಯೆಯು ನಿಗದಿತ ಸಮಯಕ್ಕೆ ಸಂಪರ್ಕಿಸಲ್ಪಟ್ಟಿದೆ

**ಕೀರ್ತನೆಗಳು 102:13**

**ನೀನು ಎದ್ದು ಚಿಯೋನನ್ನು ಕರುಣಿಸುವಿ; ಅದಕ್ಕೆ ಕೃಪೆ ತೋರಿಸುವ ಸಮಯ ಇದೆ. ನಿಯಮಿತ ಕಾಲವು ಬಂದದೆ.**

ನಿರ್ದಿಷ್ಟ ಕಾರ್ಯ ನಿಯೋಜನೆಗಾಗಿ ನಮ್ಮ ಮೇಲೆ ದೇವರ ದಯೆಯು ನಮ್ಮ ಜೀವಿತಗಳಲ್ಲಿ ಬಿಡುಗಡೆಗೊಳ್ಳಲೂ ನಿಯಮಿತ ಸಮಯಗಳಿವೆ. ನಮ್ಮ ಜೀವಿತದಲ್ಲಿ ದೇವರ ದಯೆಯು ಬಿಡುಗಡೆಗೊಳ್ಳುವ ಕ್ಷಣಗಳು - ಸಮಯಗಳು ಇವೆ ಮತ್ತು ಯಾವುದನ್ನು ಮಾಡದಿರುವುದರ ಮಧ್ಯದಲ್ಲಿ ಇದರ ಹೊರತಾಗಿಯೂ ಅಂತಹ ದಯೆಯನ್ನು ನಾವು ಹೇಗೆ ಅನುಭವಿಸಬಹುದೆಂಬುದಾಗಿ ನಾವು ಅಚ್ಚರಿ ಪಡುತ್ತೇವೆ. ಅದು ದಯೆಯ ಸುಸಮಯವಾಗಿದೆ! ನಮ್ಮ ಸಮಯಗಳು ಆತನ ಹಸ್ತಗಳಲ್ಲಿವೆ (ಕೀರ್ತನೆಗಳು 31:15). ನಿಯಮಿತ ದಯೆಯ ಸಮಯದ ನಡುವೆ ನಮ್ಮ ಮೇಲೆ ಬರುವಂತಹ ದಯೆಯನ್ನು ನಿಭಾಯಿಸಲು ಸಿದ್ಧಗೊಳಿಸುವಂತಹ ಸಿದ್ಧತೆಯ ಸಮಯಗಳು ಇವೆ.

ಈ ನಡುವೆ ನಮಗೆ ಕೊಟ್ಟಂತಹ ಕಾರ್ಯ ನಿಯೋಜನೆಯಲ್ಲಿ ನಾವು ನಂಬಿಗಸ್ಥರಾಗಿ ಉಳಿದುಕೊಳ್ಳಬೇಕು ಮತ್ತು ಕಾರ್ಯ ನಿಯೋಜನೆಯನ್ನು ನೆರವೇರಿಸಲೂ ನಮಗೆ ಕೊಟ್ಟಂತಹ ಕೃಪೆಯೊಡನೆ ಸ್ವಾಭಾವಿಕವಾಗಿ ಕೆಲಸದಲ್ಲಿ ಮುಂದುವರಿಯಬೇಕು ಮತ್ತು ನಾವು ದಯೆಯನ್ನು ಪಡೆದುಕೊಂಡಾಗ ಅದನ್ನು ದುರುಪಯೋಗ ಪಡಿಸಿಕೊಳ್ಳಬಾರದು. ಆದ್ದರಿಂದ ನಮ್ಮ ಜೀವಿತದಲ್ಲಿನ ದೇವರ ದಯೆಯ ಮುಂದಿನ ಬಿರುಮಳೆಗೆ ನಾವು ಸಿದ್ಧವಾಗಿರಬಹುದು.

## ನೀತಿವಂತಿಕೆಗೆ ದಯೆಯು ಸಂಪರ್ಕಿಸಲ್ಪಟ್ಟಿದೆ

**ಕೀರ್ತನೆಗಳು 5:12**

**ಆದಕಾರಣ ನಿನ್ನನ್ನು ಮೊರೆಹೊಕ್ಕವರೆಲ್ಲರು ಸಂತೋಷಪಡುವರು. ನೀನು ಕಾಪಾಡುವವನೆಂದು ಅವರು ಯಾವಾಗಲೂ ಆನಂದ ಧ್ವನಿ ಮಾಡುವರು. ನಿನ್ನ ನಾಮವನ್ನು ಪ್ರೀತಿಸುವವರು ನಿನ್ನಲ್ಲಿ ಉಲ್ಲಾಸಗೊಳ್ಳುವರು.**

**ದಾನಿಯೇಲನು 9:23, 10:11, 19**

**ನಿನ್ನ ವಿಜ್ಞಾಪನೆಯ ಆರಂಭದಲ್ಲಿಯೇ ದೇವರ ಅಪ್ಪಣೆಯಾಯಿತು. ಅದನ್ನು ನಿನಗೆ ತಿಳಿಸಲು ಇಲ್ಲಿಗೆ ಬಂದಿದ್ದೇನೆ. ನೀನು (ದೇವರಿಗೆ) ಅತಿ ಪ್ರಿಯ. ಈ ದೈವೋಕ್ತಿಯನ್ನು ಯೋಚಿಸು. ಆಗ ಅವನು ನನಗೆ "ದಾನಿಯೇಲನೇ, ಅತಿಪ್ರಿಯನೆ, ನಾನು ನುಡಿಯುವ ಮಾತುಗಳನ್ನು ಗ್ರಹಿಸು, ನಿಂತುಕೋ, ಈಗ ನಿನ್ನ ಬಳಿಗೇ ಕಳುಹಿಸಲ್ಪಟ್ಟಿದ್ದೇನೆ" ಎಂದು ಹೇಳಿದನು. ಹೇಳಿದ ಕೂಡಲೇ ನಾನು ನಡುಗುತ್ತಾ ನಿಂತುಕೊಂಡೆನು. ಆಮೇಲೆ ಆ ಪುರುಷನು ನನಗೆ "ಅತಿಪ್ರಿಯನೇ, ಭಯಪಡಬೇಡ. ನಿನಗೆ ಸಮಾಧಾನವಿರಲಿ. ಬಲಗೊಳ್ಳು ಬಲಗೊಳ್ಳು" ಎಂದು ಹೇಳಿದನು. ಅವನು ಆ ಮಾತನ್ನು ಹೇಳಿದ ಕೂಡಲೇ ನಾನು ಬಲಗೊಂಡು ಎನ್ನೊಡೆಯನೇ, ಮಾತಾಡು. ನನ್ನನ್ನು ಬಲಗೊಳಿಸಿದ್ದೀ ಎಂದರಿಕೆ ಮಾಡಲು.**

ದಯೆಯು ನೀತಿವಂತಿಕೆಗೆ ಸಂಪರ್ಕಿಸಲ್ಪಟ್ಟಿದೆ. ನೀತಿವಂತಿಕೆಗಾಗಿ ನಿಲ್ಲಲ್ಪಟ್ಟಂತಹ ಮನುಷ್ಯರಲ್ಲಿ ದಾನಿಯೇಲನು ಒಂದು ದೊಡ್ಡ ಉದಾಹರಣೆಯಾಗಿದ್ದಾನೆ. ಸಂಕಷ್ಟದ ಪರಿಸ್ಥಿತಿಗಳಲ್ಲೂ ಅವನು ನೀತಿವಂತಿಕೆಯಲ್ಲಿ ನಡೆದನು. ದೇವರು ಅವನನ್ನು "ಅತೀ ಪ್ರಿಯನು" ಎಂಬುದಾಗಿ ಕರೆದನು. ದೇವರು ನೀತಿವಂತನನ್ನು ಆಶೀರ್ವದಿಸುತ್ತಾನೆ. ಒಂದು ಗುರಾಣಿಯಂತೆ ಆತನ ದಯೆಯೊಡನೆ ಅವರನ್ನು ಆವರಿಸುತ್ತಾನೆ. ಆದ್ದರಿಂದ ನಾವು ನೀತಿವಂತಿಕೆಯಲ್ಲಿ ನಡೆಯುವಾಗ, ನಾವುಗಳು ದೈವಿಕ ದಯೆಯೊಡನೆ ಆವರಿಸಲ್ಪಡುತ್ತೇವೆ. ಆದ್ದರಿಂದ ಯಾರಾರು ನಮ್ಮೊಡನೆ ಸಂಪರ್ಕಕ್ಕೆ ಬರುತ್ತಾರೆ ಎಂಬುದು ಏನೇ ಆಗಿರಲಿ. ಅವರು ಕಾಣದಿರುವಂತಹ ದಯೆ - ದಯೆಯ ಒಂದು ರಕ್ಷಾ ಕವಚದ ಸಂಪರ್ಕಕ್ಕೆ ಬರುತ್ತಾರೆ.

**ಜ್ಞಾನೋಕ್ತಿಗಳು 3:3:4**
**ಪ್ರೀತಿ ಸತ್ಯತೆಗಳು ನಿನ್ನನ್ನು ಬಿಡದಿರಲಿ. ಅವುಗಳನ್ನು ನಿನ್ನ ಕೊರಳಿಗೆ ಕಟ್ಟು. ನಿನ್ನ ಹೃದಯದ ಹಲಗೆಯಲ್ಲಿ ಅವುಗಳನ್ನು ಬರೆ. ಇದರಿಂದ ನೀನು ದೇವರ ಮತ್ತು ಮನುಷ್ಯರ ದಯೆಯನ್ನೂ, ಸಮ್ಮತಿಯನ್ನೂ ಪಡೆದುಕೊಳ್ಳುವಿ.**

**ಜ್ಞಾನೋಕ್ತಿಗಳು 12:2**
**ಯೆಹೋವನು ಒಳ್ಳೆಯವನಿಗೆ ದಯೆ ಮಾಡುವನು, ಕುಯುಕ್ತಿಯುಳ್ಳವನನ್ನು ಕೆಟ್ಟವನೆಂದು ನಿರ್ಣಯಿಸುವನು.**

ಎರಡು ವಿಷಯಗಳನ್ನು ನಮ್ಮ ಹೃದಯದಲ್ಲಿಟ್ಟುಕೊಳ್ಳಬೇಕೆಂಬುದಾಗಿ ದೇವರು ನಿಜವಾಗಿ ಅಪೇಕ್ಷಿಸುತ್ತಾನೆ. ''ಕರುಣೆ'' ಇದು ಅನುಕಂಪ ಮತ್ತು ''ಸತ್ಯ'' ಇದು ಪ್ರಾಮಾಣಿಕತೆಯಾಗಿದೆ. ಸತ್ಯತೆ ಮತ್ತು ಸತ್ಯಸಂಧತೆಯಾಗಿದೆ. ನಾವುಗಳು ಇವೆರಡನ್ನು ಪಾಲಿಸಿದರೆ ದೇವರ ಮುಂದೆ ಮತ್ತು ಮನುಷ್ಯರ ಮುಂದೆ ಹೆಚ್ಚಿನ ಗೌರವ ಹೊಂದುತ್ತೀರಿ ಎಂಬುದಾಗಿ ದೇವರು ಹೇಳುತ್ತಾನೆ. ಆದ್ದರಿಂದ ನಾವು ಕರುಣೆ ಮತ್ತು ಸತ್ಯದಲ್ಲಿ ನಡೆಯುವಾಗ ಅದು ನಮ್ಮ ಜೀವಿತಗಳನ್ನು ಸಾಮಾನ್ಯವಾಗಿ ದಯೆಯನ್ನು ಅದು ಆಕರ್ಷಿಸುತ್ತದೆ.

## ಜ್ಞಾನ ಮತ್ತು ತಿಳುವಳಿಕೆಗೆ ದಯೆಯು ಸಂಪರ್ಕಿಸಲ್ಪಟ್ಟಿದೆ

**ಜ್ಞಾನೋಕ್ತಿಗಳು 8:35**
**ಯಾವನು ನನ್ನನ್ನು ಹೊಂದುತ್ತಾನೋ ಅವನು ಜೀವವನ್ನು ಹೊಂದುತ್ತಾನೆ. ಯೆಹೋವನ ಕಟಾಕ್ಷಕ್ಕೆ ಗುರಿಯಾಗುವನು/**

**ಜ್ಞಾನೋಕ್ತಿಗಳು 13:15**
**ಸುಬುದ್ಧಿಯು ದಯಾಸ್ಪದವು, ದ್ರೋಹಿಯ ಮಾರ್ಗವು, ನಾಶಕರ.**

ಜ್ಞಾನೋಕ್ತಿಗಳು 14:35
**ಜಾಣನಾದ ಸೇವಕನಿಗೆ ರಾಜನ ಕೃಪೆ, ಮಾನಗೇಡಿಗೆ ರಾಜನ ರೌದ್ರ.**

ದಯೆಯು ಜ್ಞಾನ ಮತ್ತು ತಿಳುವಳಿಕೆಗೆ ಸಂಪರ್ಕಿಸಲ್ಪಟ್ಟಿದೆ. ಯಾಕೆಂದರೆ, ನಾವು ಜ್ಞಾನ ಮತ್ತು ತಿಳುವಳಿಕೆಯೊಡನೆ ನಡೆಯಲು ಆರಿಸಿಕೊಳ್ಳುವಾಗ ನಾವು ಜೀವಿತವನ್ನು ಗುರ್ತಿಸುತ್ತೇವೆ ಮತ್ತು ದಯೆಯನ್ನು ಪಡೆಯುತ್ತೇವೆ. ಆತನು ನಮಗೆ ಕೊಡುವುದನ್ನು ನಾವು ಸರಿಯಾಗಿ ನಿಭಾಯಿಸುತ್ತೇವೆಂಬುದು ದೇವರಿಗೆ ತಿಳಿದಾಗ,

ಆತನು ದಯೆಯನ್ನು ದಯಪಾಲಿಸುತ್ತಾನೆ. ಆದ್ದರಿಂದ ಜ್ಞಾನ ಮತ್ತು ತಿಳಿವಳಿಕೆಗೆ ಬೆಲೆ ಕೊಡುವುದನ್ನು ನಾವು ಕಲಿಯಬೇಕು. ಇದು ನಮ್ಮ ಜೀವಿತಗಳಲ್ಲಿ ದೇವರ ದಯೆಯನ್ನು ಪಡೆದುಕೊಳ್ಳುವ ಸ್ಥಾನದಲ್ಲಿ ನಮ್ಮನ್ನಿರಿಸುತ್ತದೆ.

**ಕೀರ್ತನೆಗಳು 106:4**
**ಯೆಹೋವನೇ ನನ್ನನ್ನು ನೆನಪು ಮಾಡಿಕೊಂಡು ನಿನ್ನ ಪ್ರಜೆಗೆ ತೋರಿಸುವ ದಯೆಯನ್ನು ನನಗೂ ತೋರಿಸು. ನನ್ನನ್ನು ರಕ್ಷಿಸಲಿಕ್ಕೆ ಬಾ.**

**ಕೀರ್ತನೆಗಳು 119:58**
**ಪೂರ್ಣ ಮನ್ಸಸಿನಿಂದ ನಿನ್ನ ದಯೆಯನ್ನು ಅಪೇಕ್ಷಿಸಿದ್ದೇನೆ; ನಿನ್ನ ನುಡಿಗನುಸಾರವಾಗಿ ನನಗೆ ಪ್ರಸನ್ನನಾಗು.**

**ಜ್ಞಾನೋಕ್ತಿಗಳು 22:1**
**ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ. ಬೆಳ್ಳಿ ಬಂಗಾರಕ್ಕಿಂತಲೂ ಸತ್ಕೀರ್ತಿಯು ಅಮೂಲ್ಯ.**

ನಾನು ನಿಮ್ಮನ್ನು ಪ್ರೋತ್ಸಾಹಿಸುವುದೇನೆಂದರೆ,

- ದೈವಿಕ ದಯೆಗಾಗಿ ಪ್ರಾರ್ಥಿಸಿರಿ.
- ದೈವಿಕ ದಯೆಗಾಗಿ ನಿಮ್ಮನ್ನು ಸ್ಥಾನೀಕರಿಸಿಕೊಳ್ಳಿರಿ.
- ದೈವಿಕ ದಯೆ ಪಡೆದುಕೊಳ್ಳಲು ಎದುರು ನೋಡಿರಿ.

ನಿಮ್ಮ ಹೃದಯಪೂರ್ವಕವಾಗಿ ದೇವರ ದಯೆಗಾಗಿ ಕೇಳಿರಿ. ಯಾಕೆಂದರೆ, ದೈವಿಕ ದಯೆಯ ಆಶೀರ್ವಾದವು ನಿಮ್ಮ ಜೀವಿತದಲ್ಲಿ ಅತ್ಯದ್ಭುತ ಕಾರ್ಯಗಳನ್ನು ಮಾಡುತ್ತದೆ. ದಯೆಯ ಕ್ಷಣಗಳು, ದಯೆಯ ಋತುಗಳಲ್ಲಿ ಹಣವು ಖರೀದಿಸಲಾಗದಂತಹ ವಿಷಯಗಳನ್ನು ನೀವು ಪಡೆದುಕೊಳ್ಳುತ್ತೀರಿ. ಸೆರೆಮನೆಯಿಂದ ಒಬ್ಬ ಪ್ರಧಾನಮಂತ್ರಿಯಾಗಲು ವರ್ಗಾವಣೆ ಹೊಂದಿದಾಗ ಯೋಸೇಫ ಎಷ್ಟು ಹಣವನ್ನು ಪಾವತಿಸಿದನು? ರಾಣಿಯಾಗಲು ಎಸ್ತೇರಳು ಎಷ್ಟು ಹಣವನ್ನು ಪಾವತಿಸಿದಳು? ಎಲ್ಲಾ ವಿಜ್ಞಾಪನೆಗಳನ್ನು ಅನುಗ್ರಹಿಸಲೂ ನೆಹೆಮಿಯನು ಅರಸನಿಗೆ ಎಷ್ಟು ಹಣವನ್ನು ಪಾವತಿಸಿದನು?

ನಿಮ್ಮ ಕೆಲಸ, ವ್ಯಾಪಾರ, ಸೇವೆ, ವಿದ್ಯಾಭ್ಯಾಸ, ವೃತ್ತಿ ಅಥವಾ ಯಾವುದೇ ಇತರ ಕ್ಷೇತ್ರಗಳಿರಬಹುದು. ನಿಮ್ಮ ಜೀವಿತದ ಮೇಲೆ ದೇವರ ದಯೆ ಬಿಡುಗಡೆಗೊಳಿಸಲು

ಆತನನ್ನು ಕೇಳಿರಿ. ನೀವು ದಯೆಗಾಗಿ ಕರ್ತನನ್ನು ಕೇಳಿಕೊಳ್ಳಿರಿ ಮತ್ತು ನಿಮ್ಮ ಮೇಲೆ ದೇವರ ದಯೆಯು ಸುರಿಯುವಾಗ ಕ್ಷಣಮಾತ್ರದಲ್ಲಿ ಅತ್ಯದ್ಭುತಕರ, ಅಸಾಮಾನ್ಯ ವಿಷಯಗಳು ಜರುಗುತ್ತವೆ. ಅವಕಾಶಗಳು ತೆರೆಯಲ್ಪಡುತ್ತವೆ, ನಿಮ್ಮ ಪರಿಸ್ಥಿತಿಗಳು ಬದಲಾಗುತ್ತವೆ ಮತ್ತು ನಿಮ್ಮ ದುಃಖವು ಸಂತೋಷವಾಗಿ ಬದಲಾಗುತ್ತದೆ.

## ಪ್ರಾರ್ಥನೆ

*ಸರ್ವಶಕ್ತನಾದ ದೇವರೆ, ನಾನು ಜ್ಞಾನ ಮತ್ತು ನೀತಿವಂತಿಕೆಯಲ್ಲಿ ನಡೆಯುತ್ತೇನೆ. ನಾನು ದೈವಿಕ ದಯೆ ಪಡೆದುಕೊಳ್ಳಲು ನನ್ನನ್ನು ಸ್ಥಾನದಲ್ಲಿರಿಸಿಕೊಳ್ಳುತ್ತೇನೆ ಮತ್ತು ದೈವಿಕ ದಯೆ ಪಡೆದುಕೊಳ್ಳಲೂ ಎದುರು ನೋಡುತ್ತೇನೆ! ಜೊತೆಗೆ ದಯೆಯ ನಿಯಮಿತ ಸಮಯಗಳ ಮಧ್ಯಂತರಗಳ ನಡುವೆಯಲ್ಲಿ ನಿನ್ನ ಕರೆಗೆ ನಂಬಿಗಸ್ತನಾಗಿರುತ್ತೇನೆ. ವಿಷಯಗಳು ಕ್ಷಣಮಾತ್ರದಲ್ಲಿ ನನ್ನ ಜೀವಿತದಲ್ಲಿ ಬದಲಾಗುವಂತಹವುಗಳಿಗಾಗಿ ನನ್ನ ಜೀವಿತಕ್ಕೆ ಇರುವ ಮುಂದಿನ ದಯೆಯ ಸಮಯವನ್ನು ತಪ್ಪಿಸಿಕೊಳ್ಳುವುದಿಲ್ಲ. ಯೇಸುವಿನ ನಾಮದಲ್ಲಿ ಆಮೇನ್!*

# 4

# ದೇವರ ದಯೆಯ ಉಸ್ತುವಾರಿಕೆ

ದೇವರ ದಯೆಯನ್ನು ನಮ್ಮ ಮೇಲೆ ಪಡೆದುಕೊಳ್ಳುವುದು ಕೃಪೆಯ ಕಾರ್ಯವಾಗಿದೆ. ದೇವರು ನಮ್ಮ ಮೇಲೆ ದಯೆಯನ್ನು ವಿಸ್ತರಿಸುತ್ತಾನೆ ಮತ್ತು ನಾವು ಅದನ್ನು ಪಡೆದುಕೊಳ್ಳಲು ಸ್ಥಾನದಲ್ಲಿರಿಸಿಕೊಳ್ಳುತ್ತೇವೆ. ಹಾಗಿದ್ದರೂ ಆದಾದ ನಂತರ ನಾವು ಏನು ಮಾಡುತ್ತೇವೆಂಬುದು ಪ್ರಾಮುಖ್ಯವಾದುದು. ದೇವರ ಉದ್ದೇಶಗಳು ಅಂತಿಮವಾಗಿ ನೆರವೇರಲ್ಪಟ್ಟರೆ ಮತ್ತು ನಮ್ಮ ಕಾರ್ಯ ನಿಯೋಜನೆಯಲ್ಲಿನ ನಮ್ಮ ಪ್ರಗತಿಯು ದೇವರ ದಯೆಯನ್ನು ನಾವು ಉಸ್ತುವಾರಿಯಿಂದ ನೋಡಿಕೊಳ್ಳುವುದನ್ನು ನಿಶ್ಚಯಿಸುತ್ತದೆ. ಜೊತೆಗೆ ಕ್ರಮಬದ್ಧವಾಗಿ ದೇವರ ದಯೆಯನ್ನು ಉಸ್ತುವಾರಿಯಿಂದ ನೋಡಿಕೊಳ್ಳುವುದು ಆತನ ದಯೆಯ ನಿರಂತರವಾದ ಬಿಡುಗಡೆಯನ್ನು ನಿರ್ಧರಿಸುತ್ತದೆ. ಯಾಕೆಂದರೆ, ಆತನ ರಾಜ್ಯದಲ್ಲಿ ಅಲ್ಪವಾದುದರಲ್ಲಿ ನಂಬಿಗಸ್ತಿಕೆಯಿಂದ ಇರುವುದು ಅಧಿಕವಾಗಿ ಪಡೆದುಕೊಳ್ಳುವುದರ ಸ್ಥಾನದಲ್ಲಿ ನಮ್ಮನ್ನಿರಿಸುತ್ತದೆ.

ಸತ್ಯವೇದದಲ್ಲಿ ದೈವಿಕ ದಯೆಯ ಉತ್ತಮ ಮನೆವಾರ್ತೆಯಾಗಿದ್ದಂತಹ ಜನರುಗಳನ್ನು ನಾವು ನೋಡುತ್ತೇವೆ. ವಿದೇಶಿ ನೆಲದಲ್ಲಿ ಪ್ರಧಾನ ಮಂತ್ರಿಯಾಗಲು ದೈವಿಕ ದಯೆಯನ್ನು ಪಡೆದುಕೊಂಡ ಕರ್ತನಿಗೆ ಸತ್ಯಕರವಾಗಿದ್ದ, ಅವನ ಕಾರ್ಯ ನಿಯೋಜನೆಯನ್ನು ನೆರವೇರಿಸಿದ ಮತ್ತು ಅವನಿಗೆ ಕೆಟ್ಟದ್ದನ್ನು ಮಾಡಿದ ತನ್ನ ಸಹೋದರರಿಗೆ ದಯೆಯು ವಿಸ್ತರಿಸಲ್ಪಟ್ಟಂತಹ ಯೋಸೇಫನ ಕೆಲವು ಉದಾಹರಣೆಗಳಿವೆ.

ದಾವೀದನು ಕುರಿ ಕಾಯುವ ಕುರುಬನಾಗಿದ್ದರಿಂದ ಇಸ್ರಾಯೇಲ್ಯರಲ್ಲಿ ಬಲಿಷ್ಟವಾದ ಅರಸನಾಗಿ ಕಂಡುಬರುವಂತೆ ಮಾಡಿದಂತಹ ದೈವಿಕ ದಯೆಯನ್ನು ಅನುಭವಿಸಿದನು. ಅವನ ಜೀವಿತದಲ್ಲಿ ಕೆಲವು ತಪ್ಪುಗಳನ್ನು ಮಾಡಿದ್ದಾಗಲೂ ಕೊನೆಯವರೆಗೂ ಕರ್ತನ ಭಯದಲ್ಲಿ ಮತ್ತು ಪ್ರೀತಿಯಲ್ಲಿ ನಡೆದನು. ಅವನು ತನ್ನ ಸುತ್ತಲಿನ ಜನರನ್ನು ಗೌರವಿಸಿದನು ಮತ್ತು ಅವನ ಜೀವಿತದ ಮೇಲೆ ದೇವರು ದಯಪಾಲಿಸಿದ ದಯೆಯ ಉತ್ತಮ ಮನೆವಾರ್ತೆಯವನಾಗಿದ್ದನು.

ನೆಹೆಮೀಯನು ಮತ್ತೊಬ್ಬ ಅತ್ಯುತ್ತಮ ಉದಾಹರಣೆ. ಯೆರೂಸಲೇಮಿನ ಗೋಡೆಯು ತಿರುಗಿ ಕಟ್ಟುವುದರ ಕಾರ್ಯ ನಿಯೋಜನೆಯನ್ನು ನೆರವೇರಿಸಿದ ನಂತರವೂ, ಒಬ್ಬ ನಾಯಕನಾಗಿ (ಗವರ್ನರ್) ಅಂಗೀಕರಿಸಿದ್ದಾಗಲೂ, ಅವನು ಅನುಭವಿಸಬಹುದಿದ್ದಂತಹ ಸೌಲಭ್ಯಗಳನ್ನು ಹೊಂದಿಕೊಳ್ಳಲೂ ಅವನು ನಿರಾಕರಿಸಿದನು. ಅವನು ಸ್ವಂತ ಮಾತುಗಳಲ್ಲಿ *"ಅರಸನಾದ ಅರ್ತಷಸ್ತನು ನನ್ನನ್ನು ಯೆಹೂದ ದೇಶದ ಅಧಿಪತಿಯನ್ನಾಗಿ ನೇಮಿಸಿದಂದಿನಿಂದ ಹನ್ನೆರಡು ವರುಷಗಳವರೆಗೆ ಅಂದರೆ ಅವನ ಆಳ್ವಿಕೆಯ ಇಪ್ಪತ್ತನೆಯ ವರುಷದಿಂದ ಮೂವತ್ತೆರಡನೆಯ ವರುಷದವರೆಗೆ ನಾನಾಗಲಿ, ನನ್ನ ಸಹೋದರರಾಗಲಿ ದೇಶಾಧಿಪತಿಗೆ ಸಲ್ಲತಕ್ಕ ಆಯದಿಂದ ಜೀವನ ಮಾಡಲಿಲ್ಲ. ನನಗಿಂತ ಮುಂಚೆಯಿದ್ದ ದೇಶಾಧಿಪತಿಗಳು ಜನರ ಮೇಲೆ ಬಹಳ ಭಾರ ಹಾಕಿ ಅವರಿಂದ (ದಿನಕ್ಕೆ) ನಾಲ್ವತ್ತು ರೂಪಾಯಿಯ ಆಹಾರವನ್ನೂ, ದ್ರಾಕ್ಷಾರಸವನ್ನೂ ತೆಗೆದುಕೊಂಡದ್ದಲ್ಲದೆ ಅವರ ಸೇವಕರೂ ಜನರ ಮೇಲೆ ದೊರೆತನ ನಡೆಸಿದರು. ನಾನಾದರೋ ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಇರುವುದರಿಂದ ಹಾಗೆ ಮಾಡದೆ ಆ ಗೋಡೆ ಕಟ್ಟುವುದರಲ್ಲಿ ನಿರತನಾಗಿದ್ದೆನು. ಪ್ರತಿದಿನ ಒಂದು ಹೋರಿ, ಆರು ಕೊಬ್ಬಿದ ಕುರಿ, ಕೆಲವು ಕೋಳಿಗಳು ನಮ್ಮ ಭೋಜನಕ್ಕಾಗಿ ಸಿದ್ಧವಾಗುತ್ತಿದ್ದವು. ಹತ್ತು ದಿವಸಕ್ಕೊಮ್ಮೆ ನಾನು ಎಲ್ಲಾ ತರದ ದ್ರಾಕ್ಷಾರಸವನ್ನು ಬೇಕಾಗುವಷ್ಟು ಒದಗಿಸಿ ಕೊಡುತ್ತಿದ್ದೆನು. ನನಗೆ ಇಷ್ಟು ವೆಚ್ಚವಾಗುತ್ತಿದ್ದರೂ ಆ ಜನರು ಮಾಡತಕ್ಕ ಕೆಲಸವು ಬಹು ಭಾರವಾಗಿದ್ದರಿಂದ ನಾನು ದೇಶಾಧಿಪತಿಗೆ ಸಲ್ಲತಕ್ಕ ಆಯವನ್ನು ಕೇಳಲೇ ಇಲ್ಲ. ನನ್ನ ದೇವರೇ, ನಾನು ಆ ಜನರಿಗೋಸ್ಕರ ಮಾಡಿದ್ದೆಲ್ಲವನ್ನೂ ನನ್ನ ಹಿತಕ್ಕಾಗಿ ನೆನಪು ಮಾಡಿಕೋ."* (ನೆಹೆಮೀಯ 5:14, 15, 18) ಎಂಬುದಾಗಿ ನೆಹೆಮೀಯ ಹೇಳಿದನು.

ಎಸ್ತೇರಳು ದೈವಿಕ ದಯೆ ಅನುಭವಿಸಿದಳು ಮತ್ತು ರಾಣಿಯಾದಳು ಮತ್ತು ಅವಳ ಚಿತ್ತಪೂರ್ವಕವಾಗಿ ಜೀವಿತಕ್ಕೆ ಅಪಾಯವನ್ನು ಮತ್ತು ದೇವ ಜನರ ನಿಮಿತ್ತದಿಂದ ಪ್ರಭಾವಿತ ಸ್ಥಳಕ್ಕೆ ಬಂದಳು.

ಇದೇ ರೀತಿಯಲ್ಲಿ ತಮ್ಮ ಜೀವಿತಗಳಲ್ಲಿ ದೇವರ ದಯೆಯನ್ನು ಉತ್ತಮ ಮನೆವಾರ್ತೆಯವರಂತೆ ನೋಡಿಕೊಂಡಂತಹ ಇತರರು ಇದ್ದಾರೆ.

ಆದಾಗ್ಯೂ, ದಯಪಾಲಿಸಲ್ಪಟ್ಟಂತಹ ದೇವರ ದಯೆಯನ್ನು ವ್ಯರ್ಥ ಮಾಡಿದವರನ್ನು ಸಹ ನೋಡುತ್ತೇವೆ. ಅರಸನಾದ ಸೊಲೋಮೋನನು ಶ್ರೇಷ್ಠವಾದ

ಜ್ಞಾನ, ಐಶ್ವರ್ಯ, ಪ್ರಭಾವ ಮತ್ತು ದೇವಶಾಂತಿಯಿಂದ ದಯೆ ಹೊಂದಿದಾಗಲೂ ಅವರ ಸ್ತ್ರೀಯರ ಮೇಲಿದ್ದ ಪ್ರೀತಿಯಿಂದ ಅಡ್ಡದಾರಿ ಹಿಡಿದನು. ಇಸ್ರಾಯೇಲ್ಯರಲ್ಲಿ ಮಹತ್ವವುಳ್ಳ ಆಳ್ವಿಕೆಯಾಗಿದ್ದರೂ ಇದು ಅವಶೇಷವಾಗಿ ಬಿಟ್ಟಿತ್ತು. ಅರಸನಾದ ಹಿಜ್ಕೀಯನು ಯೆಹೂದದಲ್ಲಿ ಒಬ್ಬ ನೀತಿವಂತಿಕೆಯ ಉಜ್ಜೀವನ ಕಂಡಂತಹ ಒಬ್ಬ ಉತ್ತಮವಾದ ಅರಸನಾಗಿದ್ದನು ಮತ್ತು ಕರ್ತನ ಕಡೆಗೆ ಹಿಂತಿರುಗಿದನು. "ಯೆಹೋವನು ಇವನ ಸಂಗಡ ಇದ್ದದರಿಂದ ಎಲ್ಲಿಗೆ ಹೋದರೂ ಕೃತಾರ್ಥನಾಗಿ ಬರುತ್ತಿದ್ದನು" (2 ಅರಸುಗಳು 18:7). ದೇವರು ಅವನಿಗೆ ಬಿಡುಗಡೆ ಮತ್ತು ದೊಡ್ಡ ಜಯವನ್ನು ಕೊಟ್ಟಿದ್ದನ್ನು ಅವನು ನೋಡಿದನು. ಅವನ ಆಳ್ವಿಕೆಯ ಕೊನೆಯ ಹಂತದಲ್ಲಿ ಪ್ರಮುಖವಾದ ತಪ್ಪನ್ನು ಮಾಡಿದನು. ದೇವರು ಅವನ ವಶಕ್ಕೆ ಕೊಟ್ಟಿದ್ದನ್ನು ಅವನು ಸಂರಕ್ಷಿಸಲಿಲ್ಲ ಮತ್ತು ಮುಂದಿನ ತಲೆಮಾರಿಗೆ ಅದನ್ನು ಪರಂಪರೆಯಾಗಿ ರವಾನಿಸಲಿಲ್ಲ. ಬದಲಿಗೆ ಅವನು ಯೆಹೂದವನ್ನು ಬ್ಯಾಬಿಲೋನಿಯದ ಅರಸನಿಗೆ ಬಹಿರಂಗಗೊಳಿಸಿದನು, ಇದು ಅಂತಿಮವಾಗಿ ದೇಶವು ಬ್ಯಾಬಿಲೋನಿಯರಿಂದ ಸೆರೆಯಾಳುವಾಗಿ ಕೊಂಡೊಯ್ಯಲ್ಪಟ್ಟಿತ್ತು (2 ಅರಸುಗಳು 20:12-20).

ನಮ್ಮ ಜೀವಿತಗಳ ಮೇಲೆ ದೇವರು ಬಿಡುಗಡೆಗೊಳಿಸುವ ದಯೆಯನ್ನು ಕ್ರಮವಾಗಿ ಮನೆವಾರ್ತೆಯವರಾಗಿ ನೋಡಿಕೊಳ್ಳಲೂ ನಾವು ಮಾಡಬೇಕಾದ ಕೆಲವು ಪ್ರಾಮುಖ್ಯವಾದ ವಿಷಯಗಳಿವೆ:

## ದೇವರಿಗೆ ಎಲ್ಲಾ ಮಹಿಮೆ ಸಲ್ಲಿಸಿರಿ

**ಕೀರ್ತನೆಗಳು 115:1**

**ನಮ್ಮನ್ನಲ್ಲ, ಯೆಹೋವನೇ, ನಮ್ಮನ್ನಲ್ಲ, ನಿನ್ನ ಪ್ರೀತಿ ಸತ್ಯತೆಗಳ ನಿಮಿತ್ತವಾಗಿ ನಿನ್ನ ಹೆಸರನ್ನೇ ಘನಪಡಿಸು.**

ನಮ್ಮ ಜೀವಿತಗಳಲ್ಲಿರುವ ದೇವ ದಯೆಯ ಧಾರಕರಾಗಿ ನಾವು ನಮ್ಮ ದೃಷ್ಟಿಯನ್ನು ಕರ್ತನ ಮೇಲೆ ಇರಿಸುತ್ತೇವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಆತನ ಕರುಣೆಯಿಂದ ನಾವು ಪಡೆದುಕೊಂಡದ್ದಕ್ಕಾಗಿ ಘನತೆ, ಮಹಿಮೆ ಮತ್ತು ಸ್ತೋತ್ರವನ್ನು ಆತನಿಗೆ ಕೊಡಬೇಕು.

## ದೈವಿಕ ದಯೆಯ ಆಶೀರ್ವಾದವನ್ನು ಹಂಚಿಕೊಳ್ಳಿರಿ

**ನೆಹೆಮಿಾಯ 8:10**

**ಅವರಿಗೆ ಹೋಗಿ ಮೃಷ್ಟಾನ್ನವನ್ನೂ, ಮಧುರಪಾನವನ್ನೂ ತೆಗೆದುಕೊಳ್ಳಿರಿ. ತಮಗೋಸ್ಕರ ಏನೂ ಸಿದ್ಧ ಮಾಡದವರಿಗೆ ಭಾಗಗಳನ್ನು ಕಳುಹಿಸಿರಿ. ಈ ದಿನವು ನಮ್ಮ ಕರ್ತನಿಗೆ ಪ್ರತಿಷ್ಠಿತ ದಿನವಾಗಿರುವುದರಿಂದ ವ್ಯಸನ ಪಡಬೇಡಿರಿ. ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ ಅಂದನು.**

ನಮ್ಮ ಮೇಲಿರುವ ದೇವರ ದಯೆಯನ್ನು ಸಂತೋಷಿಸುವಾಗ ನಮ್ಮ ಸುತ್ತಲಿರುವವರಿಗೆ ಅದನ್ನು ಹಂಚಬೇಕೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಮ್ಮ ಸುತ್ತಲಿರುವವರು ಜೀವಿತದ ಕಠಿಣ ಸಮಯಗಳನ್ನು ಹಾದು ಹೋಗುತ್ತಿರಬಹುದು. ಬಹುಶಃ ಕೆಲವು ಹೋರಾಟಗಳ ಮೂಲಕ, ಕೆಲವು ಅಗತ್ಯತೆಗಳು ಮತ್ತು ಸವಾಲುಗಳಿರಬಹುದು. ನಾವುಗಳು ಒಳ್ಳೆಯತನವನ್ನು ನಮ್ಮ ಜೀವಿತದ ಮೇಲೆಯು ಅವರುಗಳ ಮೇಲೆಯು ಸುರಿಸಬೇಕು. ದೇವರು ನಮ್ಮನ್ನು ಆಶೀರ್ವದಿಸುತ್ತಾನೆ. ಆದ್ದರಿಂದ, ನಾವು ಆಶೀರ್ವಾದವಾಗಿರಬಹುದು.

## ದೇವರ ದಯೆಯನ್ನು ನಿಂದಿಸಬೇಡಿರಿ

ದೇವರ ದಯೆಯು ನಮ್ಮ ಮೇಲೆ ಮಾತ್ರವೇ ಅದ್ದೂರಿಯಾಗಿರುತ್ತದೆಂಬುದಾಗಿ ಅರ್ಥವಲ್ಲ. ದೇವರು ನಮ್ಮ ವಶಕ್ಕೆ ಕೊಟ್ಟಿರುವುದನ್ನು ದುರುಪಯೋಗ ಅಥವಾ ನಿಂದನೆ ಆಗಲಿ ಮಾಡುವುದಲ್ಲ. ದೇವರ ದಯೆಯು ನಮ್ಮ ಮೇಲಿರುವುದರಿಂದ ಇತರರಿಗಿಂತ ಉತ್ತಮವಾದವರೆಂಬುದಾಗಿ ಅರ್ಥವಲ್ಲ. ದೇವರ ದಯೆಯು ನಮ್ಮ ಮೇಲೆ ಇರುವುದರಿಂದ ಇತರರಿಗಿಂತ ಅಧಿಕವಾಗಿ ಪ್ರೀತಿಸಲ್ಪಟ್ಟವರೆಂಬುದಾಗಿ ಅರ್ಥವಲ್ಲ.

## ನಿರಂತರವಾಗಿ ಬೆಳೆಯುತ್ತೀರಿ

ದಯೆಯ ಸುಸಮಯಗಳನ್ನು ಸಂತೋಷಿಸುವಾಗ ದೇವರೊಡನೆ ನಮ್ಮ ಪ್ರಯಾಣದಲ್ಲಿ ''ನಿಲುಗಡೆಯ ಸ್ಥಳವಾಗಿ'' ಕಂಡು ಬರುವುದು ಎಂಬುದಾಗಿ ಖಚಿತವಾದ ಅರ್ಥವಲ್ಲ. ಆತನ ಸಾರೂಪ್ಯಕ್ಕೆ ರೂಪಾಂತರಗೊಳ್ಳುವವರಾಗಿರುವ ಮಹಿಮೆಯಿಂದ ಮಹಿಮೆಗೆ ನಾವು ಚಲಿಸಬೇಕೆಂಬುದಾಗಿ ದೇವರು ಬಯಸುತ್ತಾನೆ. ಪ್ರತಿಯೊಂದು ದಯೆಯ ಸುಸಮಯವು ನಮ್ಮನ್ನು ದೇವರಲ್ಲಿ ಅತೀ ಆಳಕ್ಕೂ ಮತ್ತು ಶ್ರೇಷ್ಠವಾದ ಎತ್ತರಗಳಿಗೂ

ಮುಂದಕ್ಕೆ ನಮಗೆ ಮುಂದೂಡಿಸುತ್ತದೆ. ಆತನ ರಾಜ್ಯದ ಸಲುವಾಗಿ ತ್ಯಾಗ; ಶಿಸ್ತು ಮತ್ತು ಶುದ್ಧೀಕರಣದ ಉನ್ನತವಾದ ಹಂತಗಳಿಗೆ ನಮ್ಮನ್ನು ನಡೆಸುತ್ತದೆ. ಆತನು ಅಧಿಕವಾಗಿ ನನಗೆ ಕೊಡುವಾಗ ಅಧಿಕವಾಗಿ ನಾನು ಮಾರ್ಪಡಲ್ಪಡುತ್ತೇನೆ.

## ಕೊಡಲ್ಪಟ್ಟಿರುವುದನ್ನು ಸಂರಕ್ಷಿಸಿ

ದಯೆಯು ಸಂರಕ್ಷಿಸಲ್ಪಡಬೇಕು. ದೇವರು ನಮಗೆ ಕೊಟ್ಟಿರುವಂತದ್ದನ್ನು ಕ್ರಮವಾಗಿ ಕಾಪಾಡಿರಿ. ದೇವರು ನಮಗೆ ದಯಪಾಲಿಸಿರುವಂತಹ ಒಳ್ಳೆಯದನ್ನು ದುರಂತವಾಗುವಂತೆ ಕಾರಣವಾಗಿರುವಂತೆ ಮಾಡಲು ವೈರಿಯು ಹುಡುಕುತ್ತಿರುತ್ತಾನೆ. ವೈರಿಯು, ಕದ್ದುಕೊಳ್ಳಲೂ, ಹಾಳು ಮಾಡಲೂ ಮತ್ತು ಹುಡುಕಿ ಕೊಲ್ಲಲು ಹುಡುಕುತ್ತಾನೆ. ಅರಸನಾದ ದಾವೀದನು ದೊಡ್ಡ ಜಯವನ್ನು ಹೊಂದಿದ್ದನು ಮತ್ತು ''ಅವನ ಸಂರಕ್ಷಣೆಯು ಬಿಡಲ್ಪಡಲಿ'' ಎಂಬುದಾಗಿ ತೀರ್ಮಾನಿಸಿದಾಗ, ಕೆಲ ಹೊತ್ತಿನಲ್ಲಿ ಬೆತ್ಸೆಬಳೊಂದಿಗೆ ಪಾಪದಲ್ಲಿ ಬಿದ್ದನು. ಆದ್ದರಿಂದ ನಮ್ಮ ಜೀವಿತದ ಮೇಲೆ ಬಿಡುಗಡೆಗೊಂಡ ದಯೆಯನ್ನು ನಿರಂತರವಾಗಿ ಜಾಗೂರೂಕತೆಯಿಂದ ಕಾಯ್ದುಕೊಳ್ಳಬೇಕು. ಸಾಮಾನ್ಯವಾಗಿ ದಯೆಯು ಎಲ್ಲಾ ಬಗೆಯ ಜನರನ್ನು ನಮ್ಮೆಡೆಗೆ ಸೆಳೆಯುತ್ತದೆ. ಎಲ್ಲರು ಉತ್ತಮವಾದ ಪ್ರೇರಣೆಗಳಿಂದ ಬರುತ್ತಾರೆ ಎಂಬುದಾಗಿಯಲ್ಲ. ಅನೇಕರು ಅವರ ಸ್ವಂತ ಸ್ವಾರ್ಥದ ಅಜೆಂಡಾಗಳಿಗಾಗಿ ನಮ್ಮ ಜೀವಿತದ ಮೇಲಿರುವಂತಹ ಹತೋಟಿಯಲ್ಲಿಟ್ಟುಕೊಳ್ಳುವಿಕೆಯ ದಯೆಯ ವಿಚಾರಗಳೊಡನೆ ಬರುತ್ತಾರೆ. ನಿಮ್ಮ ದಯೆಯ ಸುಸಮಯದ ಅವಧಿಯನ್ನು ನೀವು ಪ್ರವೇಶಿಸುವಾಗ ''ಪಾಲುಗಾರಿಕೆ'' ಮತ್ತು 'ಮೈತ್ರಿಗಳು'' ಬಗ್ಗೆ ಜಾಗರೂಕರಾಗಿರಿ. ಎಲ್ಲವನ್ನು ಶುದ್ದವಾಗಿ ಮತ್ತು ಪವಿತ್ರವಾಗಿ ಇರಿಸಿ. ರಾಜಿ ಮಾಡಿಕೊಳ್ಳುವುದನ್ನು ತಿರಸ್ಕರಿಸಿರಿ ಮತ್ತು ಯಾವಾಗಲೂ ಬೆಳಕಿನಲ್ಲಿ ನಡೆಯಿರಿ. ದೇವರ ವಾಕ್ಯದ ಗುಣಮಟ್ಟಕ್ಕೆ ಏರಿಕೆಯಾಗದಿರುವ ಅಥವಾ ಜೀವಿತದ ಮಾದರಿಗಳಿಗೆ ಹೃದಯ ಪ್ರಚೋದನೆಗಳು ಸರಿಯಾಗಿರದಿರುವ ಜನರುಗಳಿಂದ ದೂರವಾಗಿರಿ.

## ಯಶಸ್ವಿಯಾದ ಸಂತತಿಗಳಿಗೆ ಅದನ್ನು ರವಾನಿಸಿ

ದಯೆಯು ನಾವು ಮನೆವಾರ್ತೆತನ ಮಾಡುವ ಪರಂಪರೆಯಾಗಿದೆ ಮತ್ತು ಯಶಸ್ವಿಯಾದ ತಲೆಮಾರಿನ ಮೇಲೆ ರವಾನಿಸಬಹುದು. ನಮ್ಮ ನಂತರ ಬರುವವರಿಗೆ, ದೇವರ ಒಳ್ಳೆಯತನ ಮತ್ತು ಆತನ ಒಳ್ಳೆಯತನದ ಉತ್ತಮ ಮನೆವಾರ್ತೆಯವರಾಗಿರುವುದು ಹೇಗೆ ಎಂಬುದನ್ನು ಬೋಧಿಸುವಾಗ ನಾವು ಅನುಭವಿಸಿದಂತಹ ದಯೆಯೊಡನೆ

ಓಡಲು ಮತ್ತು ಪಡೆದುಕೊಳ್ಳುವ ಸ್ಥಾನದಲ್ಲಿ ಅವರನ್ನು ಇರಿಸುತ್ತೇವೆ. ನಾವು ದೈವಿಕ ದಯೆ ಅನುಭವಿಸಿದರೆ ಮತ್ತು ಯಶಸ್ವಿ ತಲೆಮಾರಿಗೆ ದೈವಿಕ ದಯೆಯಲ್ಲಿ ನಡೆಯಲು ಅವಶ್ಯವಾಗಿರುವುದೇನೆಂಬುದನ್ನು ಅರ್ಥ ಮಾಡಿಸದಿದ್ದರೆ ನಾವು ಹೊಂದಿರುವಂತದ್ದೆಲ್ಲವೂ ವ್ಯರ್ಥವಾಗುತ್ತದೆ ಮತ್ತು ತಗ್ಗಿದಂತಾಗುತ್ತದೆ. ಆದಾಗ್ಯೂ ಯಶಸ್ವಿಯಾದ ತಲೆಮಾರಿನವರು ದೇವರ ದಯೆಯಲ್ಲಿ ನಡೆಯುವುದು ಹೇಗೆ ಎಂಬುದಾಗಿ ತರಬೇತಿ ಹೊಂದಿದ್ದರೆ ನಮ್ಮಲ್ಲಿ ಪ್ರಾರಂಭವಾದದ್ದು ನಿರಂತರವಾಗಿ ಬೆಳೆಯುತ್ತದೆ, ಹೆಚ್ಚುತ್ತದೆ ಮತ್ತು ತಲೆಮಾರಿನವರಿಗಿರುವ ದೇವರ ಉದ್ದೇಶಗಳು ಹೆಚ್ಚಾಗಿ ಕಂಡು ಬರುತ್ತವೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ಧೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಹುದು/ನಮ್ಮ ಕಛೇರಿಯ ವಿಳಾಸವಾದ ಆಲ್ ಪೀಪಲ್ಸ್ ಸಭೆ ಗೆ ಬ್ಯಾಂಕ್ ಡ್ರಾಫ್ಟ್‌ಗಳನ್ನು ಕೊಡಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಹುದು.

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 5, M.G. Road, Bengaluru, Karnataka 560 001

*ದಯವಿಟ್ಟು ಗಮನಿಸಿ:* ಆಲ್ ಪೀಫಲ್ಸ್ ಸಭೆಯು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಹುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ***apcwo.org/give***.

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮೀಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

**ಉಚಿತ ಇ–ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ–ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ – ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನ್ನು, ಹಸಿದ ಜನರಿಗೆ ಐದುರೊಟ್ಟಿ ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ, ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಆದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಹುದು. ಸತ್ಯವೇದವು "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ" ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು,

ಪಾಪದ ಶಾಶ್ವತ ದೋಷಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''**(ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಹುದು.

ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತಚ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.

ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ, ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.

ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.

ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೇನ್

## ಟಿಪ್ಪಣಿಗಳು

ಟಿಪ್ಪಣಿಗಳು

ಟಿಪ್ಪಣಿಗಳು

## DOWNLOAD THE FREE APP!

*Search for*

"All Peoples Church Bangalore"
in the App or Google play stores.







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

ಸತ್ಯವೇದ ಶಾಲೆ
ಮತ್ತು ಸೇವಾತರಬೇತಿಕೇಂದ್ರ

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ(D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾತ್ಯಂದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿರಿ.

APC-BC is accredited by the
Nations Association for Theological
Accreditation NATA).

ದೇವರು ಎಲ್ಲಾ ವ್ಯಕ್ತಿಗಳನ್ನು ಸಮಾನವಾಗಿ ಪ್ರೀತಿಸುತ್ತಾನೆ ಮತ್ತು ವ್ಯಕ್ತಿಗಳನ್ನು ಗೌರವಿಸುವವನಲ್ಲ. ಆದಾಗ್ಯೂ ಮಾನವನೊಂದಿಗಿನ ಆತನ ಸಂಬಂಧಗಳಲ್ಲಿ, ಕೆಲವು ವ್ಯಕ್ತಿಗಳು ಅಥವಾ ಜನರ ಗುಂಪುಗಳ ಮೇಲೆ ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟವಾದ ಋತುಗಳಲ್ಲಿ ಅಥವಾ ಅವರ ಜೀವಿತದಲ್ಲಿನ ಕ್ಷಣಗಳಲ್ಲಿ ದೈವಿಕ ದಯೆಯನ್ನು ದೇವರು ಬಿಡುಗಡೆಗೊಳಿಸುವುದನ್ನು ನಾವು ನೋಡುತ್ತೇವೆ.

ದೈವಿಕ ದಯೆಯು ಒಬ್ಬ ವ್ಯಕ್ತಿಯ ಮೇಲೆ ಬಿಡುಗಡೆಗೊಂಡ ದೈವ ದತ್ತಿಯಾಗಿದೆ ಮತ್ತು ವ್ಯಕ್ತಿಗಳಿಗೆ ಪ್ರಭಾವವಾಗಿದೆ. ಜನರು, ಸ್ಥಳಗಳು ಅಥವಾ ವಿಷಯಗಳಿಗೆ ಅಸಾಮಾನ್ಯ ಅವಕಾಶಗಳಿಗೆ ದೈವಿಕ ಮಧ್ಯಸ್ಥಿಕೆ ಮತ್ತು ಉನ್ನತತೆಗೆ ಪ್ರವೇಶ ಕೊಡುತ್ತದೆ. ನಮ್ಮನ್ನು ಜಾಗೃತಗೊಳಿಸಿಕೊಳ್ಳಬೇಕೆಂದು ನಾನು ಬಯಸುತ್ತೇನೆ. ಆದ್ದರಿಂದ ದೇವರಿಂದ ದೈವಿಕ ದಯೆಯನ್ನು ನಾವುಗಳು ಪಡೆಯಬಹುದು ಮತ್ತು ಎದುರು ನೋಡಬಹುದು.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org